2019 ಕ.ತೀ.ವ 1203

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್

**ಮಹಾದೇವ ಅಲಿಯಾಸ್ ಪಾಪಿ ಮತ್ತು ಇನ್ನೊಬ್ಬರು -ವಿರುದ್ಧ- ಕರ್ನಾಟಕ ರಾಜ್ಯ, ಹೆಚ್.ಡಿ. ಕೋಟೆ ಪೊಲೀಸ್‌ರ ಮೂಲಕ ಮೈಸೂರು ಜಿಲ್ಲೆ***

ದಂಡ ಪ್ರಕ್ರಿಯಾ ಸಂಹಿತೆಯ 374(2)ನೇ ಪ್ರಕರಣದ ಮೇರೆಗಿನ ಕ್ರಿಮಿನಲ್ ಅಪೀಲು.

ಮೂರನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರು, ಮೈಸೂರು, ದಿನಾಂಕ 10.12.2013 ರಂದು, ಎಸ್‌ಸಿ ಸಂ.50/2012 ರಲ್ಲಿ, ಅಪೀಲುದಾರರು/ಆಪಾದಿತ ವ್ಯಕ್ತಿಗಳನ್ನು ಭಾರತ ದಂಡ ಸಂಹಿತೆಯ ಪ್ರಕರಣ 34 ರೊಂದಿಗೆ ಓದಲಾದ ಪ್ರಕರಣ 302ರ ಅಡಿಯಲ್ಲಿ ದಂಡನೀಯ ಅಪರಾಧಗಳಿಗೆ ಸಂಬಂಧಿಸಿದಂತೆ ದೋಷಿಗಳೆಂದು ನಿರ್ಣಯಿಸಿದ್ದು, ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಿ, ಭಾರತ ದಂಡ ಸಂಹಿತೆಯ ಪ್ರಕರಣ 302ರ ಅಡಿಯಲ್ಲಿ ದಂಡನೀಯ ಅಪರಾಧಗಳಿಗೆ ಸಂಬಂಧಿಸಿದಂತೆ ಪ್ರತೀ ಅಪರಾಧಕ್ಕೂ ರೂ.25,000/- ಜುಲ್ಮಾನೆಯನ್ನು ಸಹ ವಿಧಿಸಿ, ಜುಲ್ಮಾನೆ ಸಂದಾಯ ತಪ್ಪಿದ್ದಲ್ಲಿ ಆಪಾದಿತ ಸಂ.1 ಮತ್ತು 2ಕ್ಕೆ ಒಂದು ವರ್ಷದ ಸಾದಾ ಶಿಕ್ಷೆಯನ್ನು ವಿಧಿಸಿ ತೀರ್ಪನ್ನು ನೀಡಿರುತ್ತಾರೆ. ಅಪೀಲುದಾರ ಆಪಾದಿತ ಸಂ.1 ಮತ್ತು 2, ಈ ಅಪೀಲನ್ನು ಸಲ್ಲಿಸಿದ್ದು, ಇದು ಅಪರಾಧ ನಿರ್ಣಯ ತೀರ್ಪು ಮತ್ತು ಶಿಕ್ಷೆಯ ಆದೇಶದ ವಿರುದ್ಧ ನಿರ್ದೇಶಿತವಾಗಿದೆ. ಮುಂದುವರೆದು, ಜುಲ್ಮಾನೆ ಮೊತ್ತವಾದ ರೂ.25,000/- ದಲ್ಲಿ, ರೂ.20,000/- ಮೊತ್ತವನ್ನು ಮೃತನ ಪತ್ನಿಯಾದ ಪ್ರಾ.ಸಾ.2-ನೂರಲಮ್ಮರಿಗೆ (ಫಿರ್ಯಾದುದಾರಳು) ನಷ್ಟ ಪರಿಹಾರವಾಗಿ ನೀಡಬೇಕೆಂದು ಅಧಿವಿಚಾರಣಾ ನ್ಯಾಯಾಲಯವು ಆದೇಶಿಸಿದೆ.

*ಕ್ರಿಮಿನಲ್ ಅಪೀಲು ಸಂಖ್ಯೆ: 548/2014, ದಿನಾಂಕ 15ನೇ ನವೆಂಬರ್, 2018.

ಅಧಿವಿಚಾರಣಾ ನ್ಯಾಯಾಲಯದ ಮುಂದೆ, ಆಪಾದಿತರ ಅಪರಾಧವನ್ನು ರುಜುವಾತು ಪಡಿಸುವ ಸಲುವಾಗಿ ಪ್ರಾಸಿಕ್ಯೂಶನ್ ಎಲ್ಲಾ 21 ಸಾಕ್ಷಿಗಳನ್ನು ವಿಚಾರಣೆ ನಡೆಸಿದ್ದು, 28 ದಸ್ತಾವೇಜುಗಳನ್ನು ಮತ್ತು 4 ಮುದ್ದೆ ಮಾಲುಗಳನ್ನು ಗುರುತು ಮಾಡಿಕೊಳ್ಳಲಾಗಿದೆ ಮತ್ತು ಕ್ರಿಮಿನಲ್ ದಂಡ ಸಂಹಿತೆಯ ಪ್ರಕರಣ 313ರ ಅಡಿಯಲ್ಲಿ ಆಪಾದಿತರ ಹೇಳಿಕೆಯನ್ನೂ ಸಹ ದಾಖಲು ಮಾಡಿಕೊಳ್ಳಲಾಗಿದ್ದು, ಅವರ ವಿರುದ್ಧ ಮಾಡಲಾದ ಎಲ್ಲಾ ಆಪಾದನೆಯ ಸಾಕ್ಷ್ಯವನ್ನು ಅವರು ನಿರಾಕರಿಸಿದ್ದಾರೆ. ಪ್ರತಿವಾದಿ ಸಾಕ್ಷಿಯಿಂದ ಯಾರನ್ನೂ ವಿಚಾರಣೆ ನಡೆಸಿಲ್ಲ ಮತ್ತು ಪ್ರತಿವಾದಿ ಕಡೆಯಿಂದ ಯಾವ ದಸ್ತಾವೇಜುಗಳನ್ನು ಪ್ರಸ್ತುತ ಪಡಿಸಿರುವುದಿಲ್ಲ.

ಪ್ರಾಸಿಕ್ಯೂಶನ್ ಸಾಕ್ಷಿಗಳು ಮಂಡಿಸಿದ ಸಾಕ್ಷ್ಯಗಳ ಮೂಲಕ ಅಪೀಲುದಾರರ ಪರ ಮಾನ್ಯ ವಕೀಲರು ನಮ್ಮ ಗಮನವನ್ನು ತೆಗೆದುಕೊಂಡು ಹೋಗಿರುತ್ತಾರೆ. ಅಧೀನ ನ್ಯಾಯಾಲಯ ಹೊರಡಿಸಿದ ಆಕ್ಷೇಪಿತ ಅಪರಾಧ ನಿರ್ಣಯ ತೀರ್ಪು ಮತ್ತು ಶಿಕ್ಷೆಯ ಆದೇಶವು ಪ್ರಕರಣದ ಕಾನೂನು ಅಂಶಗಳು, ಸಂದರ್ಭಗಳು ಮತ್ತು ಸಂಭವನೀಯತೆಯ ವಿರುದ್ಧವಾಗಿದೆ ಎಂದು ವಾದ ಮಂಡಿಸಿದ್ದಾರೆ. ಆಪಾದಿತನ ಅಪರಾಧವನ್ನು ರುಜುವಾತುಪಡಿಸಲು ಪ್ರಾಸಿಕ್ಯೂಶನ್ ಯಾವುದೇ ವಿಶ್ವಾಸನೀಯ ಸಾಕ್ಷ್ಯಗಳನ್ನು ಮಂಡಿಸಿಲ್ಲವಾದ್ದರಿಂದ, ಆಪಾದಿತನ ವಿರುದ್ಧ ಅಪರಾಧ ನಿರ್ಣಯವನ್ನು ದಾಖಲು ಮಾಡುವಲ್ಲಿ ಅಧೀನ ನ್ಯಾಯಾಲಯವು ದೋಷವೆಸಗಿದೆ ಎಂದು ಅಪೀಲುದಾರರ ಪರ ಮಾನ್ಯ ವಕೀಲರು ವಾದ ಮಂಡಿಸಿದ್ದಾರೆ.

ವಾದ–ವಿವಾದದ ಸಂದರ್ಭದಲ್ಲಿ, ಆಪಾದಿತನ ವಾದವನ್ನು ಪರಿಗಣಿಸುವಲ್ಲಿ ಅಧಿವಿಚಾರಣಾ ನ್ಯಾಯಾಲಯವು ವಿಫಲಗೊಂಡಿದ್ದು, ಮೃತನ ದೇಹದ ಮೇಲಾದ ಗಾಯುವು ಕಾಡುಪ್ರಾಣಿಗಳ ದಾಳಿ ಅಥವಾ ಅಪಘಾತದ ಕಾರಣದಿಂದ ಸಂಭವಿಸಿರಬಹುದು, ಆದರೆ ಸದರಿ ಅಂಶವನ್ನು ಪರಿಗಣಿಸಲು ಯಾವುದೇ ನಿರ್ದಿಷ್ಟ ಸಾಕ್ಷ್ಯವಿರುವುದಿಲ್ಲ. ಆದಾಗ್ಯೂ, ಆಪಾದಿತನ ನಡವಳಿಕೆಯು ಆತನ ಉದ್ದೇಶವನ್ನು ತೋರ್ಪಡಿಸುತ್ತದೆ ಎಂಬ ತಪ್ಪು ನಿರ್ಣಯಕ್ಕೆ ಬಂದಿದ್ದು, ಈ ಸಂದರ್ಭದಲ್ಲಿ, ಪ್ರತಿಕೂಲ ಸಾಕ್ಷಿಯಾದ ಪ್ರಾ.ಸಾ.3 ರೊಂದಿಗೆ ಸೇರಿಸಲಾದ ಪ್ರಾ.ಸಾ.18ರ ಸಾಕ್ಷ್ಯ ಮತ್ತು ಇತರೆ ಸಾಂಧರ್ಬಿಕ ಸಾಕ್ಷ್ಯಗಳ ಮೇಲೆ ಅವಲಂಬಿತವಾಗಿ, ಅಭಿಪ್ರಾಯಪಡುವುದೇನೆಂದರೆ,

ಅಪರಾಧವನ್ನು ರುಜುವಾತುಪಡಿಸಲು ಯಾವುದೇ ನಿರ್ದಿಷ್ಟ ಸಾಕ್ಷ್ಯಗಳಿಲ್ಲದೇ, ಆಪಾದಿತನು ಮೃತನ ಮೇಲೆ ಹಲ್ಲೆನಡೆಸಿ ಆತನ ಸಾವಿಗೆ ಕಾರಣವಾಗಿರುತ್ತಾನೆ ಎಂಬುದಾಗಿದೆ.

ಪ್ರಾ.ಸ.5 ಸಂಜೀವಯ್ಯ, ಮೃತನಿಗೆ ಸೇರಿದ ಬಟ್ಟೆಯ ಜಪ್ತಿಗೆ ಸಂಬಂಧಿಸಿದ ಪಂಚ ಸಾಕ್ಷಿಯಾಗಿದ್ದು, ವಿಚಾರಣೆಯ ಸಂದರ್ಭದಲ್ಲಿ ಪ್ರತಿಕೂಲ ಸಾಕ್ಷಿಯಾಗಿ ಪರಿವರ್ತಿತನಾಗಿರುತ್ತಾನೆ. ಸಾಂದರ್ಭಿಕ ಸಾಕ್ಷಿಯಾದ ಪ್ರಾ.ಸಾ.6–ಸೋಮಯ್ಯ ಕೂಡ ಪ್ರತಿಕೂಲ ಸಾಕ್ಷಿಯಾಗಿ ಪರಿವರ್ತಿತನಾಗಿರುತ್ತಾನೆ. ಘಟನೆಗೆ ಪ್ರತ್ಯಕ್ಷ ಸಾಕ್ಷಿಗಳೆಂದು ಹೇಳಲಾದ ಪ್ರಾ.ಸಾ.8–ಬೆಳ್ಳಯ್ಯ, ಪ್ರಾ.ಸಾ.9–ಬೋರೆಗೌಡ ಮತ್ತು ಪ್ರಾ.ಸಾ.15–ಸೋಮ ಕೂಡ ಪ್ರತಿಕೂಲ ಸಾಕ್ಷಿಗಳಾಗಿ ಪರಿವರ್ತಿತನಾಗಿರುತ್ತಾರೆ. ಪ್ರಾಸಿಕ್ಯೂಶನ್ನಿನ ಪ್ರಕರಣವು ಮುಖ್ಯವಾಗಿ ಪ್ರಾ.ಸಾ.18–ಮಹೇಶನ ಸಾಕ್ಷ್ಯದ ಮೇಲೆ ಸುತ್ತುವರಿದಿರುತ್ತದೆ ಮತ್ತು ಪ್ರಾ.ಸಾ.18–ಮಹೇಶನು ಮೃತನ ಮತ್ತು ಆಪಾದಿತ ಸಂ.1 ಮಹದೇವ ಅಲಿಯಾಸ್ ಪಾಪಿಯ ಸಂಬಂಧಿಕನಲ್ಲದೆ ಬೇರೆ ಯಾರು ಆಗಿರುವುದಿಲ್ಲ. ಪ್ರಾ.ಸಾ.4–ಸುಶೀಲಾ ಆಪಾದಿತ ಸಂ.1ರ ಪತ್ನಿ ಮತ್ತು ಮೃತನ ಮಗಳಾಗಿರುತ್ತಾಳೆ. ಆಕೆ ಮತ್ತು ಆಪಾದಿತ ಸಂ.1 ನಡುವಿನ ನಿರ್ಬಂಧದ ಸಂಬಂಧದ ಬಗ್ಗೆ ಆಕೆಯೇ ವಿಶೇಷವಾಗಿ ಹೇಳಿಕೆ ನೀಡಿರುತ್ತಾಳೆ. ಮೃತನ ತಾಯಿಯಾದ ಪ್ರಾ.ಸಾ.14 ಜವರಮ್ಮ ಭಾಗಶಃವಾಗಿ ಪ್ರಾಸಿಕ್ಯೂಶನ್ ಪ್ರಕರಣವನ್ನು ಬೆಂಬಲಿಸಿರುತ್ತಾರೆ ಮತ್ತು ಭಾಗಶಃವಾಗಿ ಪ್ರತಿಕೂಲ ಸಾಕ್ಷಿಯಾಗಿ ಪರಿವರ್ತಿತರಾಗಿರುತ್ತಾರೆ. ಆಪಾದಿತ ಸಂ.1, ಮು.ಮಾ.1–ದೊಣ್ಣೆಯನ್ನು ಉಪಯೋಗಿಸಿ ಮೃತ ಚಿಕ್ಕ ಅಲಿಯಾಸ್ ಚಿಕ್ಕಯ್ಯನ ಮೇಲೆ ಹಲ್ಲೆ ನಡೆಸಿದನು ಎಂದು ಹೇಳಲಾಗುವುದಕ್ಕೆ ಸಂಬಂಧಿಸಿದಂತೆ ಆಕೆಯು, ತನ್ನ ಸಾಕ್ಷ್ಯದಲ್ಲಿ, ಏನನ್ನೂ ಹೇಳಿಕೆ ನೀಡಿರುವುದಿಲ್ಲ. ಪ್ರತಿಯೊಂದು ಸಾಕ್ಷಿಗಳ ಸಾಕ್ಷ್ಯಗಳಲ್ಲೂ ಅಸ್ಥಿರತೆ ಮತ್ತು ವಿವಾದವಿರುವುದು ಸಾಕ್ಷ್ಯಗಳ ಮೇಲ್ನೋಟಕ್ಕೆ ಕಂಡುಬರುತ್ತದೆ. ಪ್ರಾ.ಸ.3 ಪ್ರತಿಕೂಲ ಸಾಕ್ಷಿಯಾಗಿ ಪರಿವರ್ತಿತವಾಗಿದ್ದರೂ ಮತ್ತು ಪ್ರಾಸಿಕ್ಯೂಶನ್ ಪ್ರಕರಣವನ್ನು ಬೆಂಬಲಿಸದಿದ್ದರೂ ಸಹಾ, "ಆಪಾದಿತನ ಸಂ.1 ಮೃತನನ್ನು ಹಿಂಬಾಲಿಸಿದನು" ಎಂಬ ಅಂಶವನ್ನು ತನ್ನ ಸಾಕ್ಷ್ಯದಲ್ಲಿ ತಳ್ಳಿಹಾಕುವುದಿಲ್ಲ. ಕೆಳ ನ್ಯಾಯಾಲಯವು ಅದನ್ನು ವಿಶ್ಲೇಷಿಸುವುದರಲ್ಲಿ ವಿಫಲವಾಗಿದ್ದು, ಮೃತನ ಪತ್ನಿಯಾದ ಪ್ರಾ.ಸಾ.2 ನೂರಲಮ್ಮ ಘಟನೆಗೆ ಪ್ರತ್ಯಕ್ಷ ಸಾಕ್ಷಿಯಾಗಿರುವುದಿಲ್ಲ ಮತ್ತು ಆಕೆಯು ವದಂತಿ ಸಾಕ್ಷಿಯಾಗಿರುತ್ತಾರೆ. ಪಾಟೀ–ಸವಾಲಿನಲ್ಲಿ, ಆಪಾದಿತ ವ್ಯಕ್ತಿಗಳು ಘಟನೆ ಸಂಭವಿಸಿದ ಸ್ಥಳದ ಹತ್ತಿರ ಇದ್ದರು

ಎಂಬುದಕ್ಕೆ ಒಂದು ಸಲಹೆಯನ್ನು ನೀಡಲಾಗಿದ್ದು, ಇದರಲ್ಲಿ ಆಪಾದಿತ ವ್ಯಕ್ತಿಗಳು ಹ್ಯಾಂಡ್ ಪೋಸ್ಟ್ ಹತ್ತಿರ ಕೂಲಿಗಳಾಗಿ ಕೆಲಸ ಮಾಡುತ್ತಿದ್ದರು ಎಂದು ವಾದಿಸುತ್ತದೆ. ಮೃತರ ಮತ್ತು ಆಪಾದಿತನ ಸಂಬಂಧಿ ಎಂದು ಹೇಳಲಾದ ಪ್ರಾ.ಸಾ.3 ಜವರಯ್ಯ ಪ್ರಾರಂಭದಲ್ಲಿ ಪ್ರಾಸಿಕ್ಯೂಶನ್ ಪ್ರಕರಣವನ್ನು ಬೆಂಬಲಿಸಿದ್ದು ತದನಂತರ ಪಾಟೀ–ಸವಾಲಿನಲ್ಲಿ ಆತನು ಹೇಳಿರುವುದೇನೆಂದರೆ, ಮೃತ ಚಿಕ್ಕ ಅಲಿಯಾಸ್ ಚಿಕ್ಕಯ್ಯನು ತಲೆಗೆ ಗಾಯಗೊಂಡು ನೆಲದ ಮೇಲೆ ಬಿದ್ದಿದ್ದನು ಮತ್ತು ಅಲ್ಲಿ ನೆರದಿದ್ದ ಜನರಿಂದ ಆಪಾದಿತನು ಓಡಿ ಹೋಗಿರುವುದರ ಬಗ್ಗೆ ತಾನು ತಿಳಿದುಕೊಂಡೆನು ಎಂಬುದಾಗಿದೆ ಮತ್ತು ಇದನ್ನು ಅಧೀನ ನ್ಯಾಯಾಲಯವು ವಿಶ್ಲೇಷಿಸುವುದರಲ್ಲಿಯೂ ಸಹ ವಿಫಲಗೊಂಡಿರುತ್ತದೆ. ಆತನು ಮತ್ತೆ ಹೇಳಿಕೆ ನೀಡುವುದೇನೆಂದರೆ, ಘಟನಾ ಸ್ಥಳಕ್ಕೆ ದೌಡಾಯಿಸಿದ ಸಮಯದಲ್ಲಿ ಆಪಾದಿತನು ಅಲ್ಲಿರಲಿಲ್ಲ ಮತ್ತು ಗಾಯಗೊಂಡಾತ ನೆಲದ ಮೇಲೆ ಬಿದ್ದಿದ್ದನು ಎಂಬುದಾಗಿದೆ. ಅಧಿವಿಚಾರಣಾ ನ್ಯಾಯಾಲಯವು, ಇಷ್ಟರ ಮಟ್ಟಿಗೆ ಈ ಸಾಕ್ಷಿಯನ್ನು ಪ್ರತಿಕೂಲವಾಗಿ ನಡೆಸಿಕೊಂಡದ್ದನ್ನು ಗಮನಿಸಿಯೂ, ಮೇಲೆ ಹೇಳಲಾದ ಸದರಿ ಅಪರಾಧಗಳಿಗೆ ಆಪಾದಿತನನ್ನು ದೋಷಿ ಎಂದು ನಿರ್ಧರಿಸಬಾರದಿತ್ತು. ಆಪಾದಿತನ ಅಪರಾಧವನ್ನು ರುಜುವಾತುಪಡಿಸುವ ಸಲುವಾಗಿ, ಪ್ರಾಸಿಕ್ಯೂಶನ್ ಪರವಾಗಿ ಮಂಡಿಸಿದ ಸಾಕ್ಷ್ಯಾಧಾರಗಳಲ್ಲಿ ಮರೆಮಾಚುವ ಅಂಶವಿದೆ ಎಂದು ಈ ಎಲ್ಲಾ ಮುಖ್ಯ ಸಾಕ್ಷಿಗಳ ಸಂಪೂರ್ಣ ಸಾಕ್ಷ್ಯಾಧಾರಗಳಿಂದ ಮೇಲ್ನೋಟಕ್ಕೆ ಕಂಡುಬರುತ್ತದೆ. ಆಪಾದಿತ ಸಂ.1 ಮೃತ ಚಿಕ್ಕ ಅಲಿಯಾಸ್ ಚಿಕ್ಕಯ್ಯನನ್ನು ಮು.ಮಾ.1– ದೊಣ್ಣೆಯಿಂದ ಆತನ ಬಹುಮುಖ್ಯ ಅಂಗವಾದ ತಲೆಗೆ ಹೊಡೆದು ಹಲ್ಲೆ ನಡೆಸಿ ಗಂಭೀರವಾಗಿ ಗಾಯಗೊಳಿಸಿದನು ಎಂಬುದರಲ್ಲಿ ಮತ್ತು ನಿಶಾನೆ ಪಿ.3ರ ದೂರಿನಲ್ಲಿ ಮಾಡಿದ ದೃಢೋಕ್ತಿಗಳಿಗೆ ಅಸ್ಥಿರತೆ ಮತ್ತು ವಿವಾದಗಳಿರುವುದು ಕಂಡುಬರುತ್ತದೆ. ಈ ಎಲ್ಲಾ ಸಂದರ್ಭಗಳ ಅಡಿಯಲ್ಲಿ, ಆಪಾದಿತನ ಅಪರಾಧವನ್ನು ಸುಸ್ಥಾಪಿಸುವ ಸಲುವಾಗಿ ಪ್ರಾಸಿಕ್ಯೂಶನ್ ಪ್ರಸ್ತುತಪಡಿಸಿದ ದಸ್ತಾವೇಜು ಸಾಕ್ಷ್ಯಗಳು ಮತ್ತು ಮೌಖಿಕ ಸಾಕ್ಷ್ಯಗಳನ್ನು ಸರಿಯಾದ ದೃಷ್ಟಿಕೋನದಿಂದ ಮರು–ವಿಶ್ಲೇಷಿಸುವ ಅವಶ್ಯಕತೆಯಿರುತ್ತದೆ.

ಪ್ರಾ.ಸಾ.5, ಪ್ರಾ.ಸಾ.6, ಪ್ರಾ.ಸಾ.8, ಪ್ರಾ.ಸಾ.9, ಪ್ರಾ.ಸಾ.14, ಪ್ರಾ.ಸಾ.15 ಮಂಡಿಸಿದ ಸಾಕ್ಷ್ಯಾಧಾರಗಳು ನಿಶಾನೆ ಪಿ.12, ನಿಶಾನೆ ಪಿ.13 ಮತ್ತು ನಿಶಾನೆ ಪಿ.14ರ ಅಂಶಗಳನ್ನು ವಿರೋಧಿಸುವುದಿಲ್ಲ. ಅವರುಗಳ ಸಾಕ್ಷ್ಯವು ನಿಶಾನೆ ಪಿ.3ರಲ್ಲಿನ ದೃಢೋಕ್ತಿಗಳಿಗೆ ವಿರುದ್ಧವಾಗಿವೆ. ಈ ಎಲ್ಲಾ ಸಾಕ್ಷಿಗಳ ಸಾಕ್ಷ್ಯಾಧಾರಗಳು ಮೇಲ್ನೋಟಕ್ಕೆ

ಸೂಚಿಸುವುದೇನೆಂದರೆ ಪರಸ್ಪರ ಅಸ್ಥಿರತೆ ಮತ್ತು ವಿವಾದಗಳಿವೆ ಎಂಬುದಾಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಆಪಾದಿತನ ಅಪರಾಧವನ್ನು ರುಜುವಾತು ಪಡಿಸುವ ಸಲುವಾಗಿ ಪ್ರಾಸಿಕ್ಯೂಶನ್ ಪ್ರಸ್ತುತಪಡಿಸಿದ ಸಾಕ್ಷ್ಯಾದಲ್ಲಿ ಕೆಲವು ಮರೆಮಾಚುವ ಅಂಶಗಳಿವೆ ಎಂಬುದಾಗಿದೆ. ಮಹದೇವ ಅಲಿಯಾಸ್ ಪಾಪಿಯ ಅಪರಾಧವನ್ನು ಪ್ರಾಸಿಕ್ಯೂಶನ್ ಸುಸ್ಥಾಪಿಸಿದೆ ಎಂಬ ಸೂಕ್ತವಾದ ತೀರ್ಮಾನಕ್ಕೆ ಬರುವ ಸಲುವಾಗಿ ಈ ಎಲ್ಲಾ ಸಾಕ್ಷಿಗಳ ಸಂಪೂರ್ಣ ಸಾಕ್ಷ್ಯಾಧಾರಗಳನ್ನು ತಪ್ಪಾಗಿ ಓದಲಾಗಿದೆ ಜೊತೆಗೆ ಅಧಿವಿಚಾರಣಾ ನ್ಯಾಯಾಲಯದ ದಿಕ್ಕು ತಪ್ಪಿಸಿರುತ್ತದೆ, ಆದ್ದರಿಂದ, ಈ ಅಪೀಲಿನ ದಾಖಲೆಯಲ್ಲಿರುವ ಸಂಪೂರ್ಣ ಸಾಕ್ಷ್ಯಗಳನ್ನು ನಾವು ಮರು–ವಿಶ್ಲೇಷಣೆ ಮಾಡಬೇಕಾಗಿರುತ್ತದೆ. ಆದ್ದರಿಂದ, ಮೇಲೆ ಹೇಳಲಾದ ಎಲ್ಲಾ ಅಂಶಗಳಲ್ಲಿ, ಆಪಾದಿತ ಸಂ.1, ಆಪಾದಿತ ಸಂ.2ರ ಜೊತೆಗೂಡಿ ಮೃತ–ಚಿಕ್ಕ ಅಲಿಯಾಸ್ ಚಿಕ್ಕಯ್ಯನ ಮೇಲೆ ಮು.ಮಾ.1 (ದೊಣ್ಣೆ)ಯಿಂದ ಹಲ್ಲೆ ನಡೆಸಿ ಕೊಲೆ ಮಾಡಿದ್ದು, ಮೃತನು ಗಂಭೀರ ಗಾಯಗಳಿಗೆ ತುತ್ತಾಗಿದ್ದನು ಎಂದು ಹೇಳಲಾಗಿದ್ದು, ಇದನ್ನು ಸಾಧ್ಯಗೊಳಿಸಲು ಯಾವುದೇ ಸಕಾರಾತ್ಮಕ, ದೃಢೀಕೃತ ಮತ್ತು ಅಂಗೀಕಾರ್ಹ ಸಾಕ್ಷ್ಯಾಧಾರವನ್ನು ಪ್ರಾಸಿಕ್ಯೂಶನ್ ಪ್ರಸ್ತುತ ಪಡಿಸಲು ಸಮರ್ಥವಾಗಿರುವುದಿಲ್ಲ ಎಂಬುದು ನಮ್ಮ ಅಭಿಪ್ರಾಯವಾಗಿರುತ್ತದೆ. ಆದ್ದರಿಂದ, ಮೇಲೆ ಹೇಳಲಾದ ಕಾರಣಗಳಿಂದ, ನಾವು ಈ ಕೆಳಗಿನಂತೆ ಆದೇಶಿಸಲು ಮುಂದುವರೆಯುತ್ತೇವೆ:

## ಆದೇಶ

ಈ ಅಪೀಲನ್ನು ಪುರಸ್ಕರಿಸಲಾಗಿದೆ, ಪರಿಣಾಮವಾಗಿ, ಮೂರನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯ, ಮೈಸೂರು, ಎಸ್.ಪಿ.ಸಂ.50/2012 ರಲ್ಲಿ ದಿನಾಂಕ: 10/12.12.2013 ರಂದು ಹೊರಡಿಸಿದ ಅಪರಾಧ ನಿರ್ಣಯ ತೀರ್ಪು ಮತ್ತು ಶಿಕ್ಷೆಯ ಆದೇಶವನ್ನು ತಳ್ಳಿಹಾಕಲಾಗಿದೆ. ಭಾರತ ದಂಡ ಸಂಹಿತೆಯ ಪ್ರಕರಣ 34 ರಲ್ಲಿ ಓದಲಾದ ಪ್ರಕರಣ 302ರ ಅಡಿಯಲ್ಲಿ ದಂಡನೀಯ ಅಪರಾಧಗಳಿಗೆ ಸಂಬಂಧಿಸಿದಂತೆ ಆಪಾದಿತ ಸಂ.1 – ಮಹದೇವ ಅಲಿಯಾಸ್ ಪಾಪಿಯ ವಿರುದ್ಧ ದಾಖಲಾದ ಆರೋಪಗಳಿಂದ ಆತನನ್ನು ಈ ಮೂಲಕ ಬಿಡುಗಡೆಗೊಳಿಸಲಾಗಿದೆ.

**ಆಪಾದಿತ ಸಂ.1 – ಮಹದೇವ ಅಲಿಯಾಸ್ ಪಾಪಿಯನ್ನು, ಇನ್ನಿತರೆ ಯಾವುದೇ ಪ್ರಕರಣದಲ್ಲಿ ಆತನ ಅವಶ್ಯಕತೆ ಇಲ್ಲದಿದ್ದರೆ, ತಕ್ಷಣವೇ ಬಂಧನದಿಂದ ಮುಕ್ತಗೊಳಸಬೇಕೆಂದು ಆದೇಶಿಸಿದೆ.**

**ಆಪಾದಿತ ಸಂ.1 – ಮಹದೇವ ಅಲಿಯಾಸ್ ಪಾಪಿಯನ್ನು ತಕ್ಷಣವೇ ಬಂಧನದಿಂದ ಮುಕ್ತಗೊಳಸಲು ಸಂಬಂಧಪಟ್ಟ ಜೈಲು ಪ್ರಾಧಿಕಾರಕ್ಕೆ ಸೂಚಿಸಬೇಕೆಂದು ಈ ಮೂಲಕ ರಿಜಿಸ್ಟ್ರಾರ್ ಕಚೇರಿಗೆ ನಿರ್ದೇಶಿಸಿದೆ.**

**ಈಗಾಗಲೇ ಆಪಾದಿತನು ಯಾವುದಾದರು ಜುಲ್ಮಾನೆ ಮೊತ್ತವನ್ನು ಪಾವತಿಸಿದ್ದರೆ, ಅದನ್ನು ಸಮಂಜಸವಾದ ಗುರುತು ಮತ್ತು ರಶೀದಿಯೊಂದಿಗೆ ಆತನಿಗೆ ಹಿಂದಿರುಗಿಸಬೇಕಾಗಿ ಆದೇಶಿಸಿದೆ.**

**ಅಪೀಲನ್ನು ಅಂಗೀಕರಿಸಿದೆ.**

ಅರ್ಜಿದಾರರ ಪರ: ಶ್ರೀ ಹಶ್ಮತ್ ಪಾಶಾ, ವಕೀಲರು;
ಪ್ರತ್ಯರ್ಜಿದಾರರ ಪರ: ಶ್ರೀ ವಿಜಯ್ ಕುಮಾರ್ ಮಜಗೆ, ಹೆಚ್ಚುವರಿ ರಾಜ್ಯ ಸರ್ಕಾರಿ ವಕೀಲರು.

## ತೀರ್ಪು

**ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್:**

ಮೂರನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರು, ಮೈಸೂರು ದಿನಾಂಕ 10.12.2013 ರಂದು, ಎಸ್‌ಸಿ ಸಂ.50/2012 ರಲ್ಲಿ, ಅಪೀಲುದಾರರು/ಆಪಾದಿತ ವ್ಯಕ್ತಿಗಳನ್ನು ಭಾರತ ದಂಡ ಸಂಹಿತೆಯ ಪ್ರಕರಣ 34 ರೊಂದಿಗೆ ಓದಲಾದ ಪ್ರಕರಣ 302ರ ಅಡಿಯಲ್ಲಿ ದಂಡನೀಯ ಅಪರಾಧಗಳಿಗೆ ಸಂಬಂಧಿಸಿದಂತೆ

ದೋಷಿಗಳೆಂದು ನಿರ್ಣಯಿಸಿದ್ದು, ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಿ, ಭಾರತ ದಂಡ ಸಂಹಿತೆಯ ಪ್ರಕರಣ 302ರ ಅಡಿಯಲ್ಲಿ ದಂಡನೀಯ ಅಪರಾಧಗಳಿಗೆ ಸಂಬಂಧಿಸಿದಂತೆ ಪ್ರತೀ ಅಪರಾಧಕ್ಕೂ ರೂ.25,000/- ಜುಲ್ಮಾನೆಯನ್ನು ಸಹ ವಿಧಿಸಿ, ಜುಲ್ಮಾನೆ ಸಂದಾಯ ತಪ್ಪಿದ್ದಲ್ಲಿ ಆಪಾದಿತ ಸಂ.1 ಮತ್ತು 2ಕ್ಕೆ ಒಂದು ವರ್ಷದ ಸಾದಾ ಶಿಕ್ಷೆಯನ್ನು ವಿಧಿಸಿ ತೀರ್ಪನ್ನು ನೀಡಿರುತ್ತಾರೆ. ಅಪೀಲುದಾರ/ ಆಪಾದಿತ ಸಂ.1 ಮತ್ತು 2, ಈ ಅಪೀಲನ್ನು ಸಲ್ಲಿಸಿದ್ದು, ಇದು ಅಪರಾಧ ನಿರ್ಣಯ ತೀರ್ಪು ಮತ್ತು ಶಿಕ್ಷೆಯ ಆದೇಶದ ವಿರುದ್ಧ ನಿರ್ದೇಶಿತವಾಗಿದೆ. ಮುಂದುವರೆದು, ಜುಲ್ಮಾನೆ ಮೊತ್ತವಾದ ರೂ.25,000/- ದಲ್ಲಿ, ರೂ.20,000/- ಮೊತ್ತವನ್ನು ಮೃತನ ಪತ್ನಿಯಾದ ಪ್ರಾ.ಸಾ.2-ನೂರಲಮ್ಮರಿಗೆ (ಫಿರ್ಯಾದುದಾರಳು) ನಷ್ಟ ಪರಿಹಾರವಾಗಿ ನೀಡಬೇಕೆಂದು ಅಧಿವಿಚಾರಣಾ ನ್ಯಾಯಾಲಯವು ಆದೇಶಿಸಿದೆ.

2. ಈ ಮೊಕದ್ದಮೆಯ ಸಂಕ್ಷಿಪ್ತವಾದ ವಾಸ್ತವಿಕ ಅಂಶಗಳು ಈ ಮುಂದಿನಂತಿವೆ,- ಆಪಾದಿತ ಸಂ.1, ಮೃತ ಚಿಕ್ಕ ಅಲಿಯಾಸ್ ಚಿಕ್ಕಯ್ಯ (ಸಂಕ್ಷಿಪ್ತತೆಗೆ 'ಚಿಕ್ಕಯ್ಯ' ಎಂದು ಉಲ್ಲೇಖಿಸುವುದು) ಮತ್ತು ಫಿರ್ಯಾದುದಾರರ ಅಳಿಯನಾಗಿದ್ದು, ಫಿರ್ಯಾದುದಾರ ಮತ್ತು ಚಿಕ್ಕಯ್ಯನ ಮೊದಲನೆಯ ಮಗಳಾದ ಸುಶೀಲಾಳನ್ನು ಆಪಾದಿತ ಸಂ.1 ರೊಂದಿಗೆ, ಚಿಕ್ಕಯ್ಯನ ಸಾವಿಗೆ ಎರಡು ವರ್ಷದ ಹಿಂದೆ ವಿವಾಹ ಮಾಡಿಕೊಡಲಾಗಿದ್ದು, ಆಪಾದಿತ ಸಂ.1 ಮತ್ತು ಸುಶೀಲ, ಫಿರ್ಯಾದುದಾರ ಮತ್ತು ಮೃತರೊಂದಿಗೆ ಅವರ ಮನೆಯಲ್ಲಿಯೇ ವಾಸವಾಗಿದ್ದರು, ಮತ್ತು ಆರು ತಿಂಗಳುಗಳ ಕಾಲ ಅವರಿಬ್ಬರು ಸಂತೋಷವಾಗಿ ಜೀವನ ನಡೆಸಿದ್ದು, ತದನಂತರ, ಆಪಾದಿತ ಸಂ.1, ತನ್ನ ತಾಯಿಯ ಆರೋಗ್ಯ ಸರಿಯಿಲ್ಲದ ನೆಪ ಹೇಳಿ ಚನ್ನೇಗೌಡನ ಹುಂಡಿ ಗ್ರಾಮಕ್ಕೆ ತೆರಳಿದ್ದರು ಮತ್ತು ತದನಂತರ, ಮೃತರ ಮನೆಗೆ ನಿಯತವಾಗಿ ಹೋಗುತ್ತಿರಲಿಲ್ಲ, ಹಾಗು ಅಂದಿನಿಂದ ಆತನು ಬೇರೆಯಾಗಿ ವಾಸಿಸಲು ಶುರುಮಾಡಿದ್ದು ಮೃತನು ತನ್ನ ಮಗಳನ್ನು ತನ್ನ ಮನೆಯಲ್ಲಿಯೇ ಇರಿಸಿಕೊಂಡಿದ್ದಾರೆ ಎಂದು ಆಪಾದಿಸಿ ಮೃತರೊಂದಿಗೆ ಜಗಳವಾಡುತ್ತಿದ್ದನು ಮತ್ತು ಆತನ ಮಗಳನ್ನು ಅಂದರೆ ತನ್ನ ಪತ್ನಿಯನ್ನು ಕಳುಹಿಸಿಕೊಡಬೇಕೆಂದು ಆಪಾದಿತ ಸಂ.1 ಮೃತನ ಬಳಿ ಕೇಳಿದ್ದನು. ಮೃತನ ತಾಯಿಯಾದ ಜವರಮ್ಮ ಚೆನ್ನೇಗೌಡನ ಹುಂಡಿ

ಗ್ರಾಮದಲ್ಲಿನ ತನ್ನ ಸಹೋದರರನ ಮನೆಯಲ್ಲಿ ವಾಸವಿದ್ದು, ಆಕೆಯ ಆರೋಗ್ಯವು ಸುಸ್ಥಿತಿಯಲ್ಲಿಲ್ಲದ್ದರಿಂದ ದಿನಾಂಕ: 11.02.2010 ರಂದು ಮೃತನು ತನ್ನ ತಾಯಿಯನ್ನು ಭೇಟಿ ಮಾಡಲು ಚನ್ನೇಗೌಡನಹುಂಡಿ ಗ್ರಾಮಕ್ಕೆ ತೆರಳಿದ್ದು, ಆ ಸಂದರ್ಭದಲ್ಲಿ ಆಪಾದಿತನು ಅಲ್ಲಿದ್ದನು ಮತ್ತು ಮೃತನು ಮನೆಯಿಂದ ತೆರಳಿ ಸಂಜೆ ಸುಮಾರು 6.30ರ ವೇಳೆಯಲ್ಲಿ ಯರಹಳ್ಳಿ ಗ್ರಾಮದ ಜವರೇಗೌಡನ ಪುತ್ರನಾದ ಪುಟ್ಟೆ ಗೌಡನಿಗೆ ಸೇರಿದ ಸರ್ವೆ ನಂ.23ರ ಭೂಮಿಯ ಬದುವಿನ ಮೇಲೆ ನಡೆದುಕೊಂಡು ಹೋಗುವಾಗ, ಆಪಾದಿತ ಸಂ.1 ತನ್ನ ಸಾಮಾನ್ಯ ಉದ್ದೇಶವನ್ನು ಮುಂದುವರೆಸುತ್ತಾ, ಮೃತ ಚಿಕ್ಕಯ್ಯನನ್ನು ಕೊಲ್ಲುವ ಉದ್ದೇಶದಿಂದ ಆತನೊಂದಿಗೆ ಜಗಳ ತೆಗೆದಿದ್ದು, ಆಪಾದಿತ ಸಂ.1 ಮೃತನ ಕೈ ಮೇಲೆ ದೊಣ್ಣೆಯಿಂದ ಹಲ್ಲೆ ನಡೆಸಿದರೆ, ಆಪಾದಿತ ಸಂ.2 ಆತನನ್ನು ಬಿಗಿಹಿಡಿದು ಆತನ ಗುಪ್ತಾಂಗಕ್ಕೆ ಒದ್ದ ಕಾರಣದಿಂದ ಮೃತನು ಮಾರಣಾಂತಿಕವಾಗಿ ಗಾಯಗೊಂಡನು; ನಂತರ ಕಿರುಚಾಟದ ಶಬ್ದವನ್ನು ಕೇಳಿ ಅಕ್ಕಪಕ್ಕದವರು ಆ ಸ್ಥಳಕ್ಕೆ ಆಗಮಿಸಿದಾಗ, ಆಪಾದಿತ ವ್ಯಕ್ತಿಗಳು ಓಡಿ ಹೋದರು ಮತ್ತು ಅಲ್ಲಿ ನೆರದಿದ್ದ ಕೆಲವು ಜನರು ಗಾಯಗೊಂಡ ಚಿಕ್ಕಯ್ಯನನ್ನು ಹೆಚ್.ಡಿ.ಕೋಟೆ ಸರ್ಕಾರಿ ಆಸ್ಪತ್ರೆಗೆ ರವಾನಿಸಿದರು ಮತ್ತು ಅಲ್ಲಿಂದ ಆತನನ್ನು ಉತ್ತಮ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ರವಾನಿಸಲಾಯಿತು. ಉತ್ತಮ ಪ್ರಯತ್ನದ ಹೊರತಾಗಿಯೂ, ಸದರಿ ಚಿಕ್ಕಯ್ಯ ಗಂಭೀರವಾಗಿ ಗಾಯಗೊಂಡಿದ್ದರಿಂದ ದಿನಾಂಕ: 12.02.2010 ರಂದು ಮಧ್ಯಾಹ್ನ ಸುಮಾರು 1 ಗಂಟೆಗೆ ಮರಣ ಹೊಂದಿದ್ದರಿಂದ ಇದಕ್ಕೆ ಸಂಬಂಧಿಸಿದಂತೆ, ಫಿರ್ಯಾದುದಾರರು ಆಪಾದಿತ ವ್ಯಕ್ತಿಗಳ ವಿರುದ್ಧ ದೂರನ್ನು ದಾಖಲು ಮಾಡಿದ್ದಾರೆ.

3. ಸದರಿ ದೂರನ್ನು ಅನುಸರಿಸಿ, ವಿಚಾರಣಾ ಅಧಿಕಾರಿಯು ಮೊಕದ್ದಮೆಯನ್ನು ದಾಖಲು ಮಾಡಿಕೊಂಡು ಮೃತದೇಹದ ಪಂಚನಾಮೆಯನ್ನು ನಡೆಸಿದರು ಮತ್ತು ಪ್ರಾ.ಸಾ.11 ಆದ ವೈದ್ಯರಿಂದ ಮರಣೋತ್ತರ ಪರೀಕ್ಷೆ ನಡೆಸಲಾಯಿತು ಮತ್ತು ವಿಚಾರಣಾ ಅಧಿಕಾರಿಯು ಘಟನೆ ನಡೆದ ಸ್ಥಳಕ್ಕೆ ಭೇಟಿಕೊಟ್ಟು, ನಿಶಾನೆ ಪಿ.1 ರ ಮೇರೆಗೆ, ಮೃತನ ಮೃತ ದೇಹಕ್ಕೆ ಸಂಬಂಧಿಸಿದಂತೆ ಮಹಜ಼ರನ್ನು ಪ್ರಾ.ಸಾ.1 ರ ಸಮ್ಮುಖದಲ್ಲಿ ಪ್ರಾ.ಸಾ.19 ನಡೆಸಿದರು ಎಂದು ಹೇಳಲಾಗುತ್ತದೆ. ನಿಶಾನೆ ಪಿ.4

ಜಪ್ತಿ ಮಹಜ಼ರ್ ಆಗಿದ್ದು, ಅದನ್ನು ಪ್ರಾ.ಸಾ.5 ಮತ್ತು 7ರ ಸಮ್ಮುಖದಲ್ಲಿ ವಿಚಾರಣಾ ಅಧಿಕಾರಿಯು ನಡೆಸಿದರು ಮತ್ತು ಅವರ ಸಹಿಯನ್ನು ಪಡೆದುಕೊಂಡು ಮುದ್ದೆಮಾಲು 1ನ್ನು ವಶಪಡಿಸಿಕೊಂಡರು ಎಂದು ಹೇಳಲಾಗಿದೆ. ನಿಶಾನೆ ಪಿ.8 ಮರಣೋತ್ತರ ಪರೀಕ್ಷೆಯ ವರದಿಯಾಗಿದ್ದು, ಅದನ್ನು, ಮೃತ ಚಿಕ್ಕಯ್ಯನ ಮೃತ ದೇಹದ ಶವ ಪರೀಕ್ಷೆ ನಡೆಸಿದ ನಂತರ ಪ್ರಾ.ಸಾ.11– ಡಾ॥ ವೈ. ಉದಯಶಂಕರ್‌ರವರು ನೀಡಿರುತ್ತಾರೆ ಎಂದು ಹೇಳಲಾಗುತ್ತದೆ. ನಿಶಾನೆ ಪಿ.16 ಎಫ್‌ಐಆರ್ ಆಗಿದ್ದು, ಆಪಾದಿತನಿಂದ ಮೃತ ಚಿಕ್ಕಯ್ಯನ ಕೊಲೆಗೆ ಸಂಬಂಧಿಸಿದಂತೆ ಫಿರ್ಯಾದುದಾರರು ನೀಡಿದ ದೂರಿಗೆ ಸಂಬಂಧಿಸಿದ ಆಧಾರದ ಮೇಲೆ ದಾಖಲು ಮಾಡಿಕೊಂಡಿದ್ದು ಮತ್ತು ಸಾಕ್ಷಿಗಳ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿರುವುದಾಗಿ ಹೇಳಲಾಗುತ್ತದೆ. ಮೃತನ ಪತ್ನಿಯಾದ ಪ್ರಾ.ಸಾ.2 ನೂರಲಮ್ಮರಿಂದ ಸಲ್ಲಿಸಿದ ಸದರಿ ದೂರಿನ ಮೇರೆಗೆ, ಪೊಲೀಸರು ಭಾರತ ದಂಡ ಸಂಹಿತೆಯ ಪ್ರಕರಣ 34 ರೊಂದಿಗೆ ಓದಲಾದ ಪ್ರಕರಣ 302, 201 ರ ಅಡಿಯಲ್ಲಿ ದಂಡನೀಯ ಅಪರಾಧಗಳಿಗೆ ಸಂಬಂಧಿಸಿದಂತೆ ಅಪರಾಧ ಸಂ.54/2010 ರಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಸದರಿ ಪ್ರಕರಣದಲ್ಲಿನ ವಿಚಾರಣೆಯು ಮುಕ್ತಾಯವಾದ ನಂತರ, ವಿಚಾರಣಾ ಅಧಿಕಾರಿಯು, ಮೇಲೆ ಹೇಳಲಾದ ಅಪರಾಧಗಳಿಗೆ ಆಪಾದಿತರ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಕಮಿಟಲ್ ನ್ಯಾಯಾಲಯದ ಮುಂದೆ ಸಲ್ಲಿಸಿದ್ದು, ತದನಂತರ ಅದಕ್ಕೆ ಎಸ್.ಸಿ.ಸಂ.50/2012 ಎಂದು ಸಂಖ್ಯೆ ನೀಡಲಾಯಿತು.

4. ಅಧಿವಿಚಾರಣಾ ನ್ಯಾಯಾಲಯದ ಮುಂದೆ, ಆಪಾದಿತರ ಅಪರಾಧವನ್ನು ರುಜುವಾತು ಪಡಿಸುವ ಸಲುವಾಗಿ ಪ್ರಾಸಿಕ್ಯೂಶನ್ ಎಲ್ಲಾ 21 ಸಾಕ್ಷಿಗಳನ್ನು ವಿಚಾರಣೆ ನಡೆಸಿದ್ದು, 28 ದಸ್ತಾವೇಜುಗಳನ್ನು ಮತ್ತು 4 ಮುದ್ದೆ ಮಾಲುಗಳನ್ನು ಗುರುತು ಮಾಡಿಕೊಳ್ಳಲಾಗಿದೆ ಮತ್ತು ಕ್ರಿಮಿನಲ್ ದಂಡ ಸಂಹಿತೆಯ ಪ್ರಕರಣ 313ರ ಅಡಿಯಲ್ಲಿ ಆಪಾದಿತರ ಹೇಳಿಕೆಯನ್ನೂ ಸಹ ದಾಖಲು ಮಾಡಿಕೊಳ್ಳಲಾಗಿದ್ದು, ಅವರ ವಿರುದ್ಧ ಮಾಡಲಾದ ಎಲ್ಲಾ ಆಪಾದನೆಯ ಸಾಕ್ಷ್ಯವನ್ನು ಅವರು ನಿರಾಕರಿಸಿದ್ದಾರೆ. ಪ್ರತಿವಾದಿ ಸಾಕ್ಷಿಯಿಂದ ಯಾರನ್ನೂ ವಿಚಾರಣೆ ನಡೆಸಿಲ್ಲ ಮತ್ತು ಪ್ರತಿವಾದಿ ಕಡೆಯಿಂದ ಯಾವ ದಸ್ತಾವೇಜುಗಳನ್ನು ಪ್ರಸ್ತುತ ಪಡಿಸಿರುವುದಿಲ್ಲ.

5. ತರುವಾಯ, ಪ್ರಾಸಿಕ್ಯೂಷನ್ ಮತ್ತು ಪ್ರತಿವಾದಿ ಕಡೆಯಿಂದ ಮಂಡಿಸಿದ ವಾದವನ್ನು ಅಧಿವಿಚಾರಣಾ ನ್ಯಾಯಾಲಯವು ಆಲಿಸಿದ್ದು, ಪ್ರಾಸಿಕ್ಯೂಷನ್ ಪ್ರಸ್ತುತ ಪಡಿಸಿದ ಮೌಖಿಕ ಮತ್ತು ದಸ್ತಾವೇಜಿಯ ಸಾಕ್ಷ್ಯಧಾರವನ್ನು ಅಧಿವಿಚಾರಣಾ ನ್ಯಾಯಾಲಯವು ಪರಿಗಣಿಸಿ ನಿರ್ದಿಷ್ಟ ದಸ್ತಾವೇಜುಗಳಾದ ನಿಶಾನೆ ಪಿ.1 ಪಂಚನಾಮೆ, ನಿಶಾನೆ ಪಿ.2 ಸ್ಥಳ ಮಹಜ಼ರ್, ನಿಶಾನೆ ಪಿ.3 – ದೂರು, ನಿಶಾನೆ ಪಿ.4 ಜಪ್ತಿ ಪಂಚನಾಮೆ, ನಿಶಾನೆ ಪಿ. 8 ಮರಣೋತ್ತರ ಪರೀಕ್ಷೆ ವರದಿ, ನಿಶಾನೆ ಪಿ.9 ವೈದ್ಯಾಧಿಕಾರಿಯ ಅಭಿಪ್ರಾಯ ನಿಶಾನೆ ಪಿ.10 – ಎಮ್.ಎಲ್.ಸಿ ನೋಂದಣಿ ಪುಸ್ತಕದ ಪ್ರತಿ, ನಿಶಾನೆ ಪಿ.11 ಗಾಯಗಳ ಪ್ರಮಾಣ ಪತ್ರ, ನಿಶಾನೆ–ಪಿ–12– ಬಿಡುಗಡೆಯ ಸಾರಾಂಶ, ನಿಶಾನೆ ಪಿ–15–ಪಾಸ್‌ಪೋರ್ಟ್. ನಿಶಾನೆ ಪಿ.16 ಎಫ್.ಐ.ಆರ್, ನಿಶನೆ ಪಿ.17 ರೇಖಾಚಿತ್ರ, ನಿಶಾನೆ ಪಿ.18 ರಿಂದ 23 – ಛಾಯಚಿತ್ರಗಳು ಮತ್ತು ನಿಶಾನೆ ಪಿ.28 – ಮರಣ ಪತ್ರವನ್ನು ಅಧಿವಿಚಾರಣಾ ನ್ಯಾಯಾಲಯವು ಪರಿಶೀಲನೆ ಮಾಡಿರುತ್ತದೆ. ಈ ಪ್ರಕರಣದಲ್ಲಿ ಮುದ್ದೆಮಾಲು– 1 – ದೊಣ್ಣೆಯನ್ನು ಹಲ್ಲೆ ನಡೆಸಲು ಉಪಯೋಗಿಸಿರುವುದಾಗಿ ಹೇಳಲಾಗುತ್ತದೆ ಮತ್ತು ಮು.ಮೊ.2 ರಿಂದ 4 ಆದ ಮೃತನ ಮೃತ ದೇಹದ ಮೇಲಿದ್ದ ಬಟ್ಟೆಯನ್ನು ನಿಶಾನೆ ಪಿ.4ರ ಅಡಿಯಲ್ಲಿ ವಶಪಡಿಸಿಕೊಂಡಿದ್ದು, ಸಾಕ್ಷಾಧಾರಗಳ ಸಹಿಯು ನಿಶಾನೆ ಪಿ. (ಎ) ಯಿಂದ (ಸಿ) ಮತ್ತು ನಿಶಾನೆ ಪಿ.8 ರಿಂದ ನಿಶಾನೆ ಪಿ.12 ಮತ್ತು ನಿಶಾನೆ ಪಿ.15 ರಿಂದ ಪಿ.28 ರವರೆಗೆ ಇದ್ದು, ಅಂತಿಮವಾಗಿ, ಅಧಿವಿಚಾರಣಾ ನ್ಯಾಯಾಲಯವು ಭಾರತ ದಂಡ ಸಂಹಿತೆಯ ಪ್ರಕರಣ 302ರ ಅಡಿಯಲ್ಲಿ ಆಪಾದಿತರ ಅಪರಾಧವನ್ನು ಪ್ರಾಸಿಕ್ಯೂಷನ್ ರುಜುವಾತುಪಡಿಸಿದೆ ಎಂಬ ತೀರ್ಮಾನಕ್ಕೆ ಬಂದಿದ್ದು ಮೇಲೆ ಹೇಳಲಾದ ಅಪರಾಧಕ್ಕೆ ಅವರನ್ನು ದೋಷಿಯೆಂದು ನಿರ್ಣಯಿಸಿ ಮೇಲೆ ಹೇಳಲಾದ ಶಿಕ್ಷೆಯನ್ನು ವಿಧಿಸಿರುತ್ತದೆ.

6. ಆಪಾದಿತ ಸಂ.1 ಮೃತ ಚಿಕ್ಕಯ್ಯನ ಅಳಿಯ ಎಂಬುದು ಒಂದು ನಿರ್ವಿವಾದದ ಅಂಶವಾಗಿರುತ್ತದೆ. ಪಕ್ಷಕಾರರ ನಡುವಿನ ಸಂಬಂಧದಲ್ಲಿ ವಿವಾದವಿರುವುದಿಲ್ಲ. ಮುಂದುವರೆದು, ಮೃತ ಚಿಕ್ಕಯ್ಯನ ಮಗಳಾದ ಸುಶೀಲಳನ್ನು (ಪ್ರಾ.ಸಾ.4) ಆಪಾದಿತ ಸಂ.1 ರ ಜೊತೆ ವಿವಾಹ ಮಾಡಿಕೊಡಲಾಗಿತ್ತು ಎಂಬುದು

ಸಹ ಒಂದು ನಿರ್ವಿವಾದದ ಅಂಶವಾಗಿರುತ್ತದೆ. ಮೃತನ ಮತ್ತು ಆಪಾದಿತ ಸಂ.1 ರ ನಡುವಿನ ಸಂಬಂಧವು ಸೌಹಾರ್ದಯುತವಾಗಿರಲಿಲ್ಲ ಎಂಬುದು ಸಹಾ ಒಪ್ಪಿತವಾದ ಅಂಶವಾಗಿದ್ದು ತದನುಸಾರ ಮೃತನ ಮಗಳಾದ ಸುಶೀಲ ಮತ್ತು ಆಪಾದಿತ ಸಂ.1 ರ ನಡುವಿನ ಸಂಬಂಧವು ಪರಸ್ಪರ ವಿಶ್ವಾಸದಿಂದ ಕೂಡಿರುವುದಿಲ್ಲ. ಮುಂದುವರೆದು, ಅವರಿಬ್ಬರು ಬೇರೆಯಾಗಿ ವಾಸಿಸುತ್ತಿದ್ದರು ಎಂಬುದು ಒಪ್ಪಿತವಾದ ಅಂಶವಾಗಿರುತ್ತದೆ.

7. ಪ್ರಾಸಿಕ್ಯೂಶನ್ ಪ್ರಕಾರ, ಪ್ರಾ.ಸಾ.18–ಮಹೇಶ ಮುಖ್ಯವಾದ ಮತ್ತು ಪ್ರಮುಖ ಸಾಕ್ಷಿಯಾಗಿರುತ್ತಾನೆ. ಏಕೆಂದರೆ ಆತನೊಬ್ಬನೇ ಈ ಘಟನೆಗೆ ಪ್ರತ್ಯಕ್ಷಸಾಕ್ಷಿಯಾಗಿರುತ್ತಾನೆ. ಆತನು ತನ್ನ ಸಾಕ್ಷ್ಯದಲ್ಲಿ ನಿರ್ದಿಷ್ಟವಾಗಿ ಹೇಳಿಕೆ ನೀಡಿರುವುದೇನೆಂದರೆ, ಮೃತನು ಮತ್ತು ಆಪಾದಿತ ಸಂ.1 ಇಬ್ಬರೂ ತನ್ನ ಸಂಬಂಧಿಗಳಾಗಿದ್ದು ಮೃತನ ಮಗಳಾದ ಸುಶೀಲಾಳನ್ನು ಆಪಾದಿತ ಸಂ.1 ರೊಂದಿಗೆ ವಿವಾಹ ಮಾಡಿಕೊಡಲಾಗಿತ್ತು ಮತ್ತು ಅವರ ಸಂಬಂಧ ಸೌಹಾರ್ದಯುತವಾಗಿರಲಿಲ್ಲ ಮತ್ತು ಪರಸ್ಪರ ವಿಶ್ವಾಸದಿಂದ ಕೂಡಿರಲಿಲ್ಲ ಎಂಬುದಾಗಿದೆ. ಆಪಾದಿತ ಸಂ.1, ತನ್ನ ಪತ್ನಿಯ (ಸುಶೀಲ) ವಿಷಯಕ್ಕೆ ಸಂಬಂಧಿಸಿದಂತೆ, ಮೃತನೊಂದಿಗೆ ಜಗಳವಾಡುತ್ತಿದ್ದನು ಎಂದೂ ಸಹ ಹೇಳಿಕೆ ನೀಡಿದ್ದಾನೆ. ಹಲ್ಲೆ ನಡೆದ ದಿನದಂದು, ಪ್ರಾ.ಸಾ.18 ಮತ್ತು ಆತನ ಪತ್ನಿಯು ತಮ್ಮ ಮಕ್ಕಳೊಂದಿಗೆ ಹ್ಯಾಂಡ್ ಪೋಸ್ಟ್ ಕಡೆಗೆ ಹೋಗುತ್ತಿದ್ದು ಚಿಕ್ಕಯ್ಯ ಆತನನ್ನು ಹಿಂಬಾಲಿಸುತ್ತಿದ್ದನು ಮತ್ತು ಆ ಸಮಯದಲ್ಲಿ, ಆಪಾದಿತನು ಮೃತನನ್ನು ದೊಣ್ಣೆಯಿಂದ ಹಲ್ಲೆ ನಡೆಸಿ ಓಡಿ ಹೋದನು ಮತ್ತು ಅವರನ್ನು ಪ್ರಾ.ಸಾ.18 ಓಡಿಸಿಕೊಂಡು ಹೋದರೂ ಸಹ ಅವರನ್ನು ಹಿಂಬಾಲಿಸಲಾಗಲಿಲ್ಲ. ತಕ್ಷಣವೇ ಆತನು, ಒಂದು ಆಂಬುಲೆನ್ಸ್‌ನ್ನು ಕರೆದು ಗಾಯಾಳುವನ್ನು ಹೆಚ್.ಡಿ. ಕೋಟೆ ಸರ್ಕಾರಿ ಆಸ್ಪತ್ರೆಗೆ ರವಾನಿಸಿದನು ಎಂಬುದಾಗಿದೆ.

8. ಅಧಿವಿಚಾರಣಾ ನ್ಯಾಯಾಲಯವು, ಮೃತನ ಪತ್ನಿಯಾದ ಪ್ರಾ.ಸಾ.2 ನೂರಲಮ್ಮ ಮತ್ತು ಪ್ರಾ.ಸಾ.8–ಬೆಳ್ಳಯ್ಯ, ಪ್ರಾ.ಸಾ.10–ಮಲ್ಲರಾಜು, ಪ್ರಾ.ಸಾ.11–ಡಾ. ಉದಯಶಂಕರ್, ಪ್ರಾ.ಸಾ.12–ಡಾ॥ ಲತಾ ಎಸ್ ಮತ್ತು ನಿಶಾನೆ ಪಿ.7ಕ್ಕೆ

ಸಂಬಂಧಿಸಿದ ಪ್ರಾ.ಸಾ.13–ಡಾ. ಎಸ್.ಆರ್. ಅನಂತಕುಮಾರ್–ಎಮ್.ಎಲ್.ಸಿ. ನೋಂದಣಿ ಪುಸ್ತಕ ಮೃತರು ಒಳಗಾದ ಗಾಯಗಳಿಗೆ ಸಂಬಂಧಿಸಿದ ನಿಶಾನೆ ಪಿ.8 ಮರಣೋತ್ತರ ಪರೀಕ್ಷೆ ವರದಿ ಮತ್ತು ಮೃತರ ಸಾವಿಗೆ ಸಂಬಂಧಿಸಿದ ವೈದ್ಯರ ಅನಿಸಿಕೆಯಾದ ನಿಶಾನೆ ಪಿ.9 ಇವೆಲ್ಲ ಸಾಕ್ಷ್ಯವನ್ನು ಗಮನಿಸಿದೆ. ನಿಶಾನೆ ಪಿ.10 ಎಮ್.ಎಲ್.ಸಿ. ನೋಂದಣಿ ಪುಸ್ತಕದ ಜೆರಾಕ್ಸ್ ಪ್ರತಿಯಾಗಿದ್ದು ಅದು ಚಿಕ್ಕಯ್ಯನು ಒಳಗಾದ ಗಾಯಗಳಿಗೆ ಸಂಬಂಧಿಸಿದ್ದಾಗಿದ್ದು, ಆ ನೋಂದಣಿ ಪುಸ್ತಕವನ್ನು ಆಸ್ಪತ್ರೆಯವರು ನಿರ್ವಹಿಸುತ್ತಿದ್ದರು.

9. ಪ್ರಾ.ಸಾ.2–ನೂರಲಮ್ಮ ಒಪ್ಪಿತಳಾದಂತೆ ಪ್ರತ್ಯಕ್ಷ್ಯ ಸಾಕ್ಷಿಯಾಗಿರುವುದಿಲ್ಲ. ಆಕೆಯು ನ್ಯಾಯಾಲಯದ ಮುಂದೆ ಹೇಳಿರುವುದೇನೆಂದರೆ, ಆಪಾದಿತ ಸಂ.1 ಆಕೆಯ ಅಳಿಯನಾಗಿದ್ದು ವಿವಾಹದ ನಂತರ, ಪ್ರಾರಂಭದ ಒಂದು ವರ್ಷ ಆತನು ನಮ್ಮೊಂದಿಗೆ ವಾಸವಿದ್ದನು ಮತ್ತು ತರುವಾಯ ನಮ್ಮೊಂದಿಗೆ ಆತನು ಜಗಳವಾಡಲು ಶುರುಮಾಡಿ ಆಕೆಯ ಮಗಳಾದ ಸುಶೀಲಾಳನ್ನು ಹಿಂಸಿಸಲು ಶುರುಮಾಡಿದನು ಮತ್ತು ಆತನು ತನ್ನ ತಾಯಿಯೊಂದಿಗೆ ಬೇರೆಯಾಗಿ ವಾಸಿಸುತ್ತಿದ್ದು ಆಪಾದಿತ ಸಂ.1 ಮೃತರೊಂದಿಗೆ ಆತನ ಮಗಳನ್ನು (ಸುಶೀಲ) ತನ್ನೊಂದಿಗೆ ಕಳುಹಿಸಿಕೊಡು ಎಂದು ಯಾವಾಗಲೂ ಜಗಳ ಮಾಡುತ್ತಿದ್ದನು ಎಂಬುದಾಗಿದೆ. ಪ್ರಾ.ಸಾ.2ರ ಸಾಕ್ಷ್ಯವನ್ನು ಗಮನಿಸಿದಾಗ ಆಕೆಯು ವಿಶೇಷವಾಗಿ ಹೇಳಿರುವುದೇನೆಂದರೆ, ಮೃತ ಚಿಕ್ಕಯ್ಯನು ಆಕೆಯ ಪತಿಯಾಗಿದ್ದು ಆಕೆಗೆ ಸುಶೀಲ ಮತ್ತು ಪುಟ್ಟಿ ಎಂಬ ಎರಡು ಹೆಣ್ಣು ಮಕ್ಕಳಿದ್ದರು ಮತ್ತು ಆಕೆಯ ಮೊದಲ ಮಗಳನ್ನು ಮಹದೇವ ಅಲಿಯಾಸ್ ಪಾಪಿ ಎಂಬುವನಿಗೆ ವಿವಾಹ ಮಾಡಿಕೊಡಲಾಗಿತ್ತು ಮತ್ತು ಮತ್ತೊಬ್ಬ ಮಗಳಾದ ಪುಟ್ಟಿಯನ್ನು ಚಿಕ್ಕಮಹದೇವಯ್ಯ ಎಂಬುವನೊಂದಿಗೆ ವಿವಾಹ ಮಾಡಿಕೊಡಲಾಗಿತ್ತು ಮತ್ತು ಆಕೆಗೆ ಗಂಡು ಮಕ್ಕಳಿಲ್ಲದ ಕಾರಣ ಆಕೆಯ ಮೊದಲನೆಯ ಮಗಳಾದ ಸುಶೀಲ ಮತ್ತು ಆಕೆಯ ಪತಿ ಮಹದೇವ ಅಲಿಯಾಸ್ ಪಾಪಿ (ಆ.1) ತಮ್ಮ ಮನೆಯಲ್ಲಿಯೇ ವಾಸವಾಗಿದ್ದರು ಎಂಬುದಾಗಿದೆ. ಅವರ ವಿವಾಹದ ನಂತರ, ಆರು ತಿಂಗಳುಗಳವರೆಗೆ ಅವರ ಸಂಬಂಧವು ಸೌಹಾರ್ದಯುತವಾಗಿದ್ದು ತದನಂತರ, ಆತನು ಅವರೊಂದಿಗೆ ಜಗಳವಾಡಲು

ಶುರುಮಾಡಿದನು ಮತ್ತು ಪತ್ನಿಯನ್ನು ಆಕೆಯ ತವರು ಮನೆಯಲ್ಲೇ ಬಿಟ್ಟು ಆತನ ತಾಯಿಯ ಮನಗೆ ಹೊರಟು ಹೋದನು ಮತ್ತು ತದನಂತರ, ತನ್ನ ಪತ್ನಿಯಾದ ಸುಶೀಲಾಳು ತವರು ಮನೆಯಲ್ಲೇ ಇರುವ ವಿಷಯದ ಮೇಲೆ ಆಗಾಗ್ಗೆ ಮೃತರೊಂದಿಗೆ ಜಗಳಮಾಡಲು ಶುರುಮಾಡಿ ತನ್ನ ಪತ್ನಿಯಾದ ಸುಶೀಲಾಳನ್ನು (ಮೃತನ ಮತ್ತು ಫಿರ್ಯಾದುದಾರ ಮಗಳು) ತನ್ನೊಂದಿಗೆ ಕಳುಹಿಸಿಕೊಡಿ ಎಂದು ಕೇಳಲು ಶುರುಮಾಡಿದನು ಮತ್ತು ಮೃತನು ಸುಶೀಲಾಳನ್ನು ತನ್ನೊಂದಿಗೆ ಕಳುಹಿಸದಿದ್ದರೆ ಆತನನ್ನು ಕೊಲ್ಲುವುದಾಗಿ ಬೆದರಿಸಿದನು; ಮೇಲೆ ಹೇಳಲಾದ ದುರ್ದಿನದಂದು, ಮೃತನು ಕಾಯಿಲೆಯಿಂದ ನರಳುತ್ತಿದ್ದ ತನ್ನ ತಾಯಿಯಾದ ಜವರಮ್ಮನನ್ನು ನೋಡಲು ಚನ್ನೇಗೌಡನಹುಂಡಿ ಗ್ರಾಮಕ್ಕೆ ಹೋಗಿದ್ದು, ಅದೇ ದಿನ ಸಂಜೆ ಸುಮಾರು 6.00 ಗಂಟೆಗೆ ಪ್ರಾ.ಸಾ.2, ಪ್ರಾ.ಸಾ.8 ಬೆಳ್ಳಯ್ಯರವರಿಂದ ಆಪಾದಿತ ಸಂ.1 ಮತ್ತು 2 ಮೃತನನ್ನು ಹಲ್ಲೆ ನಡೆಸಿರುವ ಮತ್ತು ಮೃತನನ್ನು ಹೆಚ್.ಡಿ. ಕೋಟೆ ಆಸ್ಪತ್ರೆಗೆ ದಾಖಲಿಸಿದ ಬಗ್ಗೆ ದೂರವಾಣಿಯಲ್ಲಿ ಮಾಹಿತಿಯನ್ನು ಪಡೆದರು. ತಕ್ಷಣವೇ, ಪ್ರಾ.ಸಾ.4 ಆದ ತನ್ನ ಮಗಳು ಸುಶೀಲಳೊಂದಿಗೆ ಪ್ರಾ.ಸಾ.2 ಸಂಜೆ ಸುಮಾರು 7 ಗಂಟೆಗೆ ಹೆಚ್.ಡಿ. ಕೋಟೆ ಆಸ್ಪತ್ರೆಗೆ ಹೋಗಿದ್ದು, ಆ ಸಮಯದಲ್ಲಿ ಹಲ್ಲೆಗೊಳಗಾದ ಚಿಕ್ಕಯ್ಯನು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದನು ಮತ್ತು ಹಲ್ಲೆಗೊಳಗಾದ ಚಿಕ್ಕಯ್ಯನ ತಲೆ ಮತ್ತು ಅಂಡಾಶಯದಲ್ಲಿ ಗಾಯಗೊಂಡಿರುವುದನ್ನು ಅವರು ಗಮನಿಸಿದರು ಮತ್ತು ಅಲ್ಲಿಂದ ಮೃತನನ್ನು ಉತ್ತಮ ಚಿಕಿತ್ಸೆಗೆ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ರವಾನಿಸಲಾಯಿತು ಮತ್ತು ಇಷ್ಟೆಲ್ಲಾಮಾಡಿದರೂ, ಮೃತನು ಮರುದಿನ ಮಧ್ಯಾಹ್ನ ಸುಮಾರು 1 ಗಂಟೆಗೆ ಸದರಿ ಆಸ್ಪತ್ರೆಯಲ್ಲಿ ಮರಣ ಹೊಂದಿದನು. ಮೃತನ ಸಾವಿನ ಸುದ್ದಿಯನ್ನು ಪೊಲೀಸರಿಗೆ ತಿಳಿಸಲಾಯಿತು ಮತ್ತು ತದನಂತರ ಮೇಲೆ ಹೇಳಲಾದ ಆಪಾದನೆಗಳಿಗೆ ಆಪಾದಿತನ ವಿರುದ್ಧ ಪೊಲೀಸರು ಪ್ರಕರಣವನ್ನು ದಾಖಲು ಮಾಡಿಕೊಂಡರು. ಆಪಾದಿತ ಸಂ.1 ಆದ ಮಹದೇವ ಅಲಿಯಾಸ್ ಪಾಪಿ ಕೂಲಿ ಕೆಲಸ ಮಾಡಿಕೊಂಡಿದ್ದು, ದಿನಾ ಬೆಳಗ್ಗೆ ಸುಮಾರು 8 ಗಂಟೆಗೆ ಕೂಲಿ ಕೆಲಸಕ್ಕೆ ಹೋಗಿ, ಸಂಜೆ ಸುಮಾರು 5 ಗಂಟೆಗೆ ಮನೆಗೆ ಹಿಂದಿರುಗುತ್ತಿದ್ದನು ಎಂದು ಪ್ರಾ.ಸಾ.2 ತನ್ನ ಸಾಕ್ಷ್ಯದಲ್ಲಿ ಹೇಳಿಕೆ ನೀಡಿರುವುದನ್ನು ಗಮನಿಸಲಾಗಿದ್ದು, ಆಕೆಯ ಪಾಟೀ–ಸವಾಲಿನಲ್ಲಿ, ಮೃತನ ಮೇಲಿನ

ಹಲ್ಲೆ ಅಥವಾ ಅವರ ಕೊಲೆಯ ಉದ್ದೇಶವು ಸಂದೇಹಾಸ್ಪದವಾಗಿರುವುದಿಲ್ಲ ಎಂಬುದು ಕಂಡುಬಂದಿದೆ. ದೇವಲಾಪುರದ ನಿವಾಸಿಗಳಾದ ಮತ್ತು ಮೃತನ ಮೇಲೆ ಹಲ್ಲೆ ನಡೆಸಿದ ಆಪಾದಿತ ವ್ಯಕ್ತಿಗಳ ಬಗ್ಗೆ ಪ್ರಾ.ಸಾ.2ಕ್ಕೆ ಮಾಹಿತಿ ನೀಡಿದ ಬೆಳ್ಳಯ್ಯ ಮತ್ತು ಜವರಯ್ಯ ಆಪಾದಿತನಾದ ಮಹದೇವ ಅಲಿಯಾಸ ಪಾಪಿಯ ಸಂಬಂಧಿಗಳಾಗಿದ್ದು, ಮೃತನ ಮೇಲೆ ಹಲ್ಲೆ ನಡೆದ ಮಾಹಿತಿ ದೊರೆತಾಗ ಆಕೆಯು ತನ್ನ ಮನೆಯಲ್ಲಿದ್ದು ಸದರಿ ವ್ಯಕ್ತಿಗಳಾದ ಬೆಳ್ಳಯ್ಯ ಮತ್ತು ಜವರಯ್ಯ ಆಕೆಯ ಪತಿಯ ಮೇಲೆ ಯಾರು ಹಲ್ಲೆ ನಡೆಸಿದರು ಎಂಬ ಬಗ್ಗೆ ಮಾಹಿತಿ ನೀಡಿರುವುದಿಲ್ಲ ಎಂದು ಪ್ರಾ.ಸಾ.2 ಮುಂದುವರಿದು ಹೇಳುತ್ತಾರೆ. ಫಿರ್ಯಾದುದಾರರ ಮಗಳಾದ ಪ್ರಾ.ಸಾ.4–ಸುಶೀಲಾರ ಸಾಕ್ಷ್ಯ ಮತ್ತು ಪ್ರಾ.ಸಾ.2ರ (ಫಿರ್ಯಾದುದಾರ) ಸಾಕ್ಷ್ಯವು ಒಂದಕ್ಕೊಂದು ವಿಧಿಯುಕ್ತವಾಗಿ ದೃಢೀಕರಿಸುತ್ತದೆ ಎಂಬುದು ಪ್ರಾಸಿಕ್ಯೂಷನ್ನಿನ ವಾದವಾಗಿರುತ್ತದೆ.

10. ಪ್ರಾ.ಸಾ.18–ಮಹೇಶ ಘಟನೆಗೆ ಪ್ರತ್ಯಕ್ಷ ಸಾಕ್ಷಿಯಾಗಿದ್ದು, ಆಪಾದಿತ ಸಂ.1 ಮತ್ತು 2, ಆ ದುರ್ದಿನದಂದು ಚಿಕ್ಕಯ್ಯನನ್ನು ಹ್ಯಾಂಡ್ ಪೋಸ್ಟ್ ಬಳಿ ಹಿಂಬಾಲಿಸಿದರು ಮತ್ತು ಮೃತ ಚಿಕ್ಕಯ್ಯನ ಕೊಲೆಯನ್ನು ಆಪಾದಿತನು ಮಾಡಿದ್ದು, ಮು.ಮಾ.1–ದೊಣ್ಣೆಯಿಂದ ಮೃತರ ಬಹುಮುಖ್ಯ ಅಂಗಗಳಾದ ತಲೆಯನ್ನು ಆರಿಸಿ ಆಪಾದಿತ ಸಂ.1 ಆದ ಮಹದೇವ ಅಲಿಯಾಸ್ ಪಾಪಿ ಹಲ್ಲೆ ನಡೆಸಿರುವುದಾಗಿ ಹೇಳಲಾಗಿದ್ದು, ಆಪಾದಿತ ಸಂ.2 ಮೃತನ ಗುಪ್ತಾಂಗಕ್ಕೆ ಒದ್ದು ಹಲ್ಲೆ ನಡೆಸಿದರ ಪರಿಣಾಮವಾಗಿ, ಮೃತನು ಮಾರಣಾಂತಿಕ ಹಲ್ಲೆಗೊಳಗಾಗಿ ಮರಣಹೊಂದಿದನು ಎಂದು ಪ್ರಾ.ಸಾ.18 ಮಹೇಶ ತನ್ನ ಹೇಳಿಕೆಯಲ್ಲಿ ಹೇಳಿರುವುದನ್ನು ಗಮನಿಸಲಾಗಿದೆ.

11. ಪ್ರಾಸಿಕ್ಯೂಶನ್ ಸಾಕ್ಷಿಗಳು ಮಂಡಿಸಿದ ಸಾಕ್ಷ್ಯಗಳ ಮೂಲಕ ಅಪೀಲುದಾರರ ಪರ ಮಾನ್ಯ ವಕೀಲರು ನಮ್ಮ ಗಮನವನ್ನು ತೆಗೆದುಕೊಂಡು ಹೋಗಿರುತ್ತಾರೆ. ಅಧೀನ ನ್ಯಾಯಾಲಯ ಹೊರಡಿಸಿದ ಆಕ್ಷೇಪಿತ ಅಪರಾಧ ನಿರ್ಣಯ ತೀರ್ಪು ಮತ್ತು ಶಿಕ್ಷೆಯ ಆದೇಶವು ಪ್ರಕರಣದ ಕಾನೂನು ಅಂಶಗಳು, ಸಂದರ್ಭಗಳು ಮತ್ತು ಸಂಭವನೀಯತೆಯ ವಿರುದ್ಧವಾಗಿದೆ ಎಂದು ವಾದ ಮಂಡಿಸಿದ್ದಾರೆ.

ಆಪಾದಿತನ ಅಪರಾಧವನ್ನು ರುಜುವಾತುಪಡಿಸಲು ಪ್ರಾಸಿಕ್ಯೂಶನ್ ಯಾವುದೇ ವಿಶ್ವಾಸನೀಯ ಸಾಕ್ಷ್ಯಗಳನ್ನು ಮಂಡಿಸಿಲ್ಲವಾದ್ದರಿಂದ, ಆಪಾದಿತನ ವಿರುದ್ಧ ಅಪರಾಧ ನಿರ್ಣಯವನ್ನು ದಾಖಲು ಮಾಡುವಲ್ಲಿ ಅಧೀನ ನ್ಯಾಯಾಲಯವು ದೋಷವೆಸಗಿದೆ ಎಂದು ಅಪೀಲುದಾರರ ಪರ ಮಾನ್ಯ ವಕೀಲರು ವಾದ ಮಂಡಿಸಿದ್ದಾರೆ.

11.1 ದಿನಾಂಕ: 11.02.2010 ರಂದು ಸಂಜೆ 7.12 ಗಂಟೆಗೆ ಹೆಚ್.ಡಿ.ಕೋಟೆ ಸರ್ಕಾರಿ ಆಸ್ಪತ್ರೆಯಿಂದ ಮೃತನ ಮೇಲೆ ಹಲ್ಲೆಯಾದ ವರದಿಯು (ನಿಶಾನೆ ಪ್ರಾ.ಸಾ.26) ಪೊಲೀಸರಿಗೆ ದೊರೆತಿದ್ದು, ದಿನಾಂಕ: 12.02.2010ರ ಆತನ ಮರಣ ಪತ್ರವನ್ನು ಪೊಲೀಸರು ದಿನಾಂಕ: 12.02.2010 ರಂದು ಪಡೆದುಕೊಂಡಿದ್ದು, ದಿನಾಂಕ: 11.02.2010 ರಂದು, ಮರಣ ಪತ್ರ ಪಡೆದುಕೊಳ್ಳುವ ಮುನ್ನವೇ, ಭಾರತ ದಂಡ ಸಂಹಿತೆಯ ಪ್ರಕರಣ 34ರಲ್ಲಿ ಓದಲಾದ 302 ಮತ್ತು 201ರ ಪ್ರಕರಣದ ಶಿಕ್ಷಾರ್ಹ ಅಪರಾಧಗಳ ಅಡಿಯಲ್ಲಿ ಎಫ್.ಐ.ಆರ್ ದಾಖಲು ಮಾಡಲಾಯಿತು ಎಂದು ಮಾನ್ಯ ವಕೀಲರು ಮುಂದುವರಿದು ವಾದ ಮಂಡಿಸುತ್ತಾರೆ ನಿಶಾನೆ ಪಿ.3–ದೂರು ಒಂದು ಕಟ್ಟು ಕಥೆಯಾಗಿದ್ದು, ಪೊಲೀಸರು ಮೃತನ ಪತ್ನಿಯಾದ ಪ್ರಾ.ಸಾ.2 ನೂರಲಮ್ಮ ಮತ್ತು ಪ್ರಾ.ಸಾ.4 ಆದ ಮೃತನ ಮಗಳ ಹೇಳಿಕೆ ಅಥವಾ ದೂರನ್ನು ದಾಖಲು ಮಾಡಿಕೊಳ್ಳದ ಕಾರಣದಿಂದ ತುಂಬಾ ವಿವೇಚನೆಯ ನಂತರ ಆಪಾದಿತರ ಹೆಸರನ್ನು ದೂರಿನಲ್ಲಿ ಸೇರಿಸಲಾಯಿತು ಮತ್ತು ದೂರನ್ನು ಅತಿ ಶೀಘ್ರವೇ ದಾಖಲು ಮಾಡಿಲ್ಲದ್ದನ್ನು ಈ ಅಪೀಲಿನಲ್ಲಿ ಪರಿಗಣಿಸುವ ಅಗತ್ಯವಿದ್ದು, ಅದನ್ನು ಅಧಿವಿಚಾರಣಾ ನ್ಯಾಯಾಲಯವು ಪರಿಗಣನೆ ಮಾಡಿರುವುದಿಲ್ಲ ಎಂದು ಅಪೀಲುದಾರರ ಪರ ಮಾನ್ಯ ವಕೀಲರು ಮುಂದುವರೆದು ವಾದಿಸಿದ್ದಾರೆ.

11.2 ಮುಂದುವರಿದು, ಮಾನ್ಯ ವಕೀಲರ ವಾದವೇನೆಂದರೆ, ಹೇಳಲಾದ ಯಾವ ಪ್ರತ್ಯಕ್ಷ ಸಾಕ್ಷಿಯೂ ಕಾನೂನಾತ್ಮಕ ಪ್ರಕ್ರಿಯೆಗಳನ್ನು ಪ್ರಾರಂಭಿಸುವಲ್ಲಿ ಯಾವುದೇ ಪ್ರಯತ್ನವನ್ನು ಮಾಡಿರುವುದಿಲ್ಲ. ದೂರನ್ನು ಯಾಕೆ ಶೀಘ್ರವೇ ದಾಖಲಿಸಲಿಲ್ಲ ಎಂಬುದಕ್ಕೆ ಯಾವುದೇ ಕಾರಣಗಳಿರುವುದಿಲ್ಲ ಮತ್ತು ಪ್ರಾಸಿಕ್ಯೂಶನ್, ಪ್ರಾ.ಸಾ.3, ಪ್ರಾ.ಸಾ.6, ಪ್ರಾ.ಸಾ.8, ಪ್ರಾ.ಸಾ.9, ಪ್ರಾ.ಸಾ.15 ಮತ್ತು ಘಟನೆಗೆ ಪ್ರತ್ಯಕ್ಷ ಸಾಕ್ಷಿಯಾದ

ಪ್ರಾ.ಸಾ.18ರ ಸಾಕ್ಷಿಗಳ ಮೇಲೆ ಅವಲಂಬಿತವಾಗಿದೆ. ಆದರೆ ಪ್ರಾ.ಸಾ.2 ಮತ್ತು ಪ್ರಾ.ಸಾ.4 ರಿಂದ ಬಂದ ಆರಂಭಿಕ ಮಾಹಿತಿಯ ಪ್ರಕಾರ ಮೃತನ ಮೇಲೆ ಯಾರು ಹಲ್ಲೆ ನಡೆಸಿದರು ಎಂಬುದನ್ನು ಯಾರೂ ನೋಡಿರುವುದಿಲ್ಲ ಮತ್ತು ಘಟನೆ ಸಂಭವಿಸಿದಾಗ ಆ ಸ್ಥಳದಲ್ಲಿ ಯಾರೂ ಇರಲಿಲ್ಲ ಮತ್ತು ಅವರು ಆ ಘಟನಾ ಸ್ಥಳಕ್ಕೆ ಹೋದಾಗ ಮೃತನನ್ನು ಆಗಲೇ ಆಸ್ಪತ್ರೆಗೆ ರವಾನಿಸಲಾಗಿತ್ತು ಎಂಬುದು ತಿಳಿಯುತ್ತದೆ. ಸದರಿ ಕಾರಣಗಳಿಂದ, ಭಾರತ ದಂಡ ಸಂಹಿತೆಯ ಪ್ರಕರಣ 34ರಲ್ಲಿ ಓದಲಾದ 302, 201ರ ಪ್ರಕರಣದಲ್ಲಿನ ಶಿಕ್ಷಾರ್ಹ ಅಪರಾಧಗಳಿಗೆ ಸಂಬಂಧಿಸಿದಂತೆ ಎಫ್.ಐ.ಆರ್. ದಾಖಲಿಸಲಾಗಿದ್ದು, ನಿಶಾನೆ ಪ್ರಾ.3ರ ಪ್ರಕಾರ ಕೇವಲ ಒಂದು ದೂರನ್ನು ಮಾತ್ರ ಪ್ರಾ.ಸಾ.2 ರಿಂದ ದಾಖಲು ಮಾಡಲಾಯಿತು ಎಂದು ಮಾನ್ಯ ವಕೀಲರು ವಾದ ಮಂಡಿಸಿದ್ದಾರೆ.

11.3 ಕೃತ್ಯ ನಡೆದ ಸ್ಥಳದಲ್ಲಿ, ಆಪಾದಿತ ಪ್ರತ್ಯಕ್ಷ ಸಾಕ್ಷಿಯು ನಿಜವಾಗಿಯೂ ಹಾಜರಿದ್ದರೆ, ಆ ಸಂದರ್ಭದಲ್ಲಿ ಅವರ ನಡವಳಿಕೆ ಏನಾಗಿತ್ತು ಮತ್ತು ಅವರು ಮೃತನ ನೆರವಿಗೆ ಏಕೆ ಹೋಗಲಿಲ್ಲ ಮತ್ತು ಚಿಕಿತ್ಸೆಗಾಗಿ ಆತನನ್ನು ಏಕೆ ಆಸ್ಪತ್ರೆಗೆ ಕರೆದುಕೊಂಡು ಹೋಗಲಿಲ್ಲ ಮತ್ತು ಶೀಘ್ರವೇ ಪೊಲೀಸರಿಗೆ ದೂರನ್ನು ಏಕೆ ನೀಡಲಿಲ್ಲ ಎಂಬುದು ಮಾನ್ಯ ವಕೀಲರ ಮುಂದುವರೆದ ವಾದವಾಗಿರುತ್ತದೆ. ಆಪಾದಿತನು ಮೃತನ ಮೇಲೆ ಹಲ್ಲೆ ನಡೆಸುವುದನ್ನು ಯಾರೂ ನೋಡಿರುವುದಿಲ್ಲ ಎಂಬುದನ್ನು ಇದು ತೋರಿಸುತ್ತದೆ. ಪ್ರಾ.ಸಾ.2 ಮತ್ತು ಪ್ರಾ.ಸಾ.4 ಕೂಡ ಮೃತನ ಮೇಲೆ ಯಾರು ಹಲ್ಲೆ ನಡೆಸಿದರು ಎಂದು ಖಚಿತವಾಗಿ ಗೊತ್ತಿಲ್ಲದಿದ್ದರಿಂದ, ಮೃತನ ಸಾವು ಸಂಭವಿಸುವವರೆಗೂ ಮತ್ತು ಸಾವಿನ ನಂತರ ಸಂಜೆ 5.45 ರವರೆಗೂ ಅವರುಗಳು ದೂರನ್ನು ದಾಖಲು ಮಾಡಿರುವುದಿಲ್ಲ. ತದನಂತರ, ತುಂಬಾ ವಿವೇಚನೆಯ ನಂತರ ಪೊಲೀಸರು ನಿಶಾನೆ ಪಿ.3 ಅನ್ನು ಸಿದ್ಧಪಡಿಸಿದ್ದು, ಅದನ್ನು ಆಪಾದಿತನ ವಿರುದ್ಧ ದೂರು ದಾಖಲು ಮಾಡಿಕೊಳ್ಳಲು ಎಫ್.ಐ.ಆರ್. ರೀತಿಯಲ್ಲಿ ಬಳಕೆ ಮಾಡಲಾಗುವುದಿಲ್ಲವೆಂದು ವಾದಿಸಿದ್ದಾರೆ.

11.4 ಈ ಎಲ್ಲಾ ಕಾರಣಗಳಿಂದಾಗಿ, ವಿಚಾರಣೆಯ ಸಂದರ್ಭದಲ್ಲಿ ಪ್ರಾ.ಸಾ.3, ಪ್ರಾ.ಸಾ.6, ಪ್ರಾ.ಸಾ.8, ಪ್ರಾ.ಸಾ.9, ಪ್ರಾ.ಸಾ.10 ಇವು ಘಟನೆಗೆ ಪ್ರತ್ಯಕ್ಷ ಸಾಕ್ಷಿಗಳು ಎಂಬ ಪ್ರಾಸಿಕ್ಯೂಶನ್ ಸಿದ್ಧಾಂತವನ್ನು ಬೆಂಬಲಿಸುವುದಿಲ್ಲ ಮತ್ತು ಅವುಗಳು ಘಟನೆಗೆ ನಿಜವಾಗಿಯೂ ಪ್ರತ್ಯಕ್ಷ ಸಾಕ್ಷಿಯಾಗಿರುವುದಿಲ್ಲದ್ದರಿಂದ, ಅಧೀನ ನ್ಯಾಯಾಲಯವು ಅವರ ಸಾಕ್ಷ್ಯಗಳನ್ನು ನಂಬಬಾರದು ಎಂದು ಮುಂದುವರೆದು ವಾದಿಸುತ್ತಾರೆ. ಪ್ರಾ.ಸಾ.18– ಮಹೇಶ ಘಟನೆಗೆ ಏಕೈಕ ಪ್ರತ್ಯಕ್ಷ ಸಾಕ್ಷಿಯಾಗಿದ್ದು, ಮೃತರ ಸಂಬಂಧಿಯಾದ್ದರಿಂದ ಪ್ರಾಸಿಕ್ಯೂಶನ್ ವಾದಕ್ಕೆ ಬೆಂಬಲ ನೀಡಿದ್ದಾರೆ ಎಂದು ಮುಂದುವರೆದು ನಿವೇದಿಸುತ್ತಾರೆ. ಪ್ರಾ.ಸಾ.18, ಮೃತನ ಸಂಬಂಧಿಯಾಗಿದ್ದು, ಆತನು ತನ್ನ ಪತ್ನಿ ಮತ್ತು ಮಕ್ಕಳೊಂದಿಗೆ ತನ್ನ ಗ್ರಾಮದ ಕಡೆಗೆ ಹೋಗುತ್ತಿದ್ದಾಗ ಆ ಘಟನೆಯನ್ನು ನೋಡಿದನು ಎಂದು ಹೇಳಲಾಗುತ್ತದೆ. ಹಾಗಾಗಿದ್ದರೆ, ಆತನ ಸ್ವಾಭಾವಿಕ ನಡುವಳಿಕೆಯು ಮೃತನ ನೆರವಿಗೆ ಹೋಗುವ ಮತ್ತು ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ನಂತರ ಹಲ್ಲೆ ನಡೆಸಿದವನ ವಿರುದ್ಧ ಪೊಲೀಸರ ಬಳಿ ದೂರು ದಾಖಲು ಮಾಡುವುದಾಗಿರುತ್ತಿತ್ತು. ಇದೇನೂ ಮಾಡದೆ ಘಟನೆ ಸಂಭವಿಸಿದ ಸಂದರ್ಭದಲ್ಲಿ ಆತನ ಉಪಸ್ಥಿತಿಯು ಸಂಶಯಾಸ್ಪದವಾಗಿರುತ್ತದೆ ಮತ್ತು ಆತನ ಸಾಕ್ಷ್ಯವು ಸಂಪೂರ್ಣವಾಗಿ ವಿಶ್ವಾಸಕ್ಕೆ ಯೋಗ್ಯವಲ್ಲದ್ದಾಗಿರುತ್ತದೆ. ಆದ್ದರಿಂದ, ಆಪಾದಿತನ ವಿರುದ್ಧ ಅಪರಾಧ ನಿರ್ಣಯಕ್ಕೆ ಯಾವುದೇ ಬಲವಾದ ಸಾಕ್ಷ್ಯವಿಲ್ಲದೆ ಕೇವಲ ಆತನ ಸಾಕ್ಷ್ಯದ ಮೇಲೆ ಅವಲಂಬಿತವಾಗಿ ಅಧಿವಿಚಾರಣಾ ನ್ಯಾಯಾಲಯವು ಗಂಭೀರವಾದ ದೋಷವೆಸಗಿದೆಯೆಂದೂ ಸಹಾ ವಾದಿಸಿದ್ದಾರೆ.

11.5 ನಿಶಾನೆ ಪಿ.7–ಎಮ್.ಎಲ್.ಸಿ ನೋಂದಣಿ ಪುಸ್ತಕದ ಪ್ರತಿ, ನಿಶಾನೆ ಪಿ.11–ಗಾಯಗಳ ಪ್ರಮಾಣ ಪತ್ರ ಮತ್ತು ನಿಶಾನೆ ಪಿ.12–ಬಿಡುಗಡೆಯ ಸಾರಾಂಶಗಳಲ್ಲಿ ಹಲ್ಲೆಯ ಮಾಹಿತಿ ಮತ್ತು ಇಬ್ಬರೂ ಆಪಾದಿತ ವ್ಯಕ್ತಿಗಳ ಹೆಸರನ್ನು ಉಲ್ಲೇಖಿಸಲಾಗಿದೆ ಮತ್ತು ಇನ್ನೂ ಕೆಲವು ಸದರಿ ದಸ್ತಾವೇಜುಗಳಲ್ಲಿ, ಕೇವಲ ಮೊದಲನೆಯ ಆಪಾದಿತನ ಹೆಸರನ್ನು ಮಾತ್ರ ಉಲ್ಲೇಖಿಸಲಾಗಿದ್ದು ಅಧಿವಿಚಾರಣಾ ನ್ಯಾಯಾಲಯವು ಇವುಗಳ ಮೇಲೆ ಅವಲಂಬಿತವಾಗಿ ದೋಷವೆಸಗಿದೆ ಎಂದು ಮುಂದುವರೆದು ವಾದಿಸುತ್ತಾರೆ. ಘಟನೆ ನಡೆದ ಸಂದರ್ಭದಲ್ಲಿ ಮತ್ತು

ಮರಣ ಹೊಂದುವವರೆಗೂ ಮೃತನು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದನು. ಈ ಎಲ್ಲಾ ದಸ್ತಾವೇಜುಗಳಲ್ಲಿ ಉಲ್ಲೇಖಿಸಲಾದ ಮಾಹಿತಿಗೆ, ಅಸ್ವೀಕಾರ್ಯತೆಯ ಕಾರಣದಿಂದಾಗಿ, ಯಾವುದೇ ಮಹತ್ವವನ್ನು ನೀಡಕೂಡದು. ಆಪಾದಿತನು, ಮೃತನ ಅಳಿಯನಾಗಿದ್ದು, ಮೃತನೊಂದಿಗೆ ಭಿನ್ನಾಭಿಪ್ರಾಯವಿದ್ದ ಕಾರಣಗಳಿಂದ ಮಾತ್ರ ಆತನನ್ನು ಶಂಕಿಸಿ ತಪ್ಪಾಗಿ ಆತನನ್ನು ಇದರಲ್ಲಿ ಸೇರಿಸಲಾಗಿದ್ದು, ಆತನನ್ನು ಮತ್ತು ಆಪಾದಿತ ಸಂ.2 ಇಬ್ಬರನ್ನೂ ದೋಷಿ ಎಂದು ಹೇಳಲು ಕಾನೂನಾತ್ಮಕವಾದ ಯಾವುದೇ ಅಂಗೀಕೃತ ಸಾಕ್ಷ್ಯವು ದಾಖಲೆಯಲ್ಲಿಲ್ಲ ಎಂದು ವಾದ ಮಂಡಿಸಿದ್ದಾರೆ.

12. ಈ ಎಲ್ಲಾ ಆಧಾರದ ಮೇಲೆ, ಅಧಿವಿಚಾರಣಾ ನ್ಯಾಯಾಲಯವು, ಆಪಾದಿತನ ಅಪರಾಧವನ್ನು ಪ್ರಾಸಿಕ್ಯೂಶನ್ ಸಂದೇಹಾತೀತವಾಗಿ ರುಜುವಾತುಪಡಿಸಿದೆ ಎಂದು ತೀರ್ಮಾನಕ್ಕೆ ಬರುವುದರಲ್ಲಿ ದೋಷವೆಸಗಿರುವುದರಿಂದ, ಅಪೀಲುದಾರರ ಪರ ಮಾನ್ಯ ವಕೀಲರು ಆಕ್ಷೇಪಿತ ಅಪರಾಧ ನಿರ್ಣಯ ತೀರ್ಪು ಮತ್ತು ಶಿಕ್ಷೆಯ ಆದೇಶವನ್ನು, ಸಂಪೂರ್ಣ ಸಾಕ್ಷ್ಯಗಳನ್ನು ಸರಿಯಾದ ದೃಷ್ಟಿಯಿಂದ ಮರು ಮೌಲ್ಯಮಾಪನ ಮಾಡುವ ಮೂಲಕ ಮರು–ಪರಿಶೀಲನೆ ಮಾಡಲು ಕೋರಿದ್ದಾರೆ. ಆದ್ದರಿಂದ, ಈ ಅಪೀಲನ್ನು ಅನುಮತಿಸುತ್ತಾ, ಅಧಿವಿಚಾರಣಾ ನ್ಯಾಯಾಲಯವು ಎಸ್.ಸಿ.ಸಂ.50/2012 ರಲ್ಲಿ ಹೊರಡಿಸಿದ ಆಕ್ಷೇಪಿತ ಅಪರಾಧ ನಿರ್ಣಯ ತೀರ್ಪು ಮತ್ತು ಶಿಕ್ಷೆಯ ಆದೇಶವನ್ನು ರದ್ದುಪಡಿಸಬೇಕೆಂದು ಅಪೀಲುದಾರರ ಪರ ಮಾನ್ಯ ವಕೀಲರು ವಿನಂತಿಸಿಕೊಂಡಿದ್ದಾರೆ.

13. ಅಪೀಲುದಾರರ ಪರ ಮಾನ್ಯ ವಕೀಲರು ಮಂಡಿಸಿದ ವಾದಕ್ಕೆ ವಿರುದ್ಧವಾಗಿ, ಸರ್ಕಾರದ ಪರವಾಗಿ ಮಾನ್ಯ ಹೆಚ್ಚುವರಿ ರಾಜ್ಯ ಸರ್ಕಾರಿ ವಕೀಲರು, ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಆಕ್ಷೇಪಿತ ಅಪರಾಧ ನಿರ್ಣಯದ ತೀರ್ಪು ಮತ್ತು ಶಿಕ್ಷೆಯ ಆದೇಶವನ್ನು ನಮ್ಮ ಗಮನಕ್ಕೆ ತಂದಿರುತ್ತಾರೆ. ಆಪಾದಿತ ವ್ಯಕ್ತಿಗಳು ಮೃತನ ಬಹುಮುಖ್ಯ ಅಂಗಗಳ ಮೇಲೆ ಮು.ಮಾ.1–ದೊಣ್ಣೆಯಿಂದ ಹಲ್ಲೆ ನಡೆಸಿದ್ದ ಕಾರಣದಿಂದ ಆಂತರಿಕ ರಕ್ತಸ್ರಾವವಾಗಿ ಆತನು ಮೃತಪಟ್ಟನು ಮತ್ತು ಆ ಮೂಲಕ ಆಪಾದಿತನು ಭಾರತ ದಂಡ ಸಂಹಿತೆಯ ಪ್ರಕರಣ 34 ರೊಂದಿಗೆ

ಓದಲಾದ ಪ್ರಕರಣ 302 ರ ಶಿಕ್ಷಾರ್ಹ ಅಪರಾಧಗಳ ಅಡಿಯಲ್ಲಿ ಅಪರಾಧವನ್ನೆಸಗಿದ್ದಾನೆ ಎಂದು ಪ್ರಾಸಿಕ್ಯೂಶನ್ ಪ್ರಸ್ತುತ ಪಡಿಸಿದ ಮೌಖಿಕ ಹಾಗೂ ದಸ್ತಾವೇಜು ಸಾಕ್ಷ್ಯಗಳು ಸ್ಪಷ್ಟವಾಗಿ ಸುಸ್ಥಾಪಿಸುತ್ತದೆ ಎಂದು ವಾದ ಮಂಡಿಸಿದ್ದಾರೆ. ಸಂಬಂಧದಲ್ಲಿ ಪರಸ್ಪರ ವಿಶ್ವಾಸವಿಲ್ಲದ್ದರಿಂದ ಆಪಾದಿತನು ಒಂದು ಉದ್ದೇಶವನ್ನು ಹೊಂದಿದ್ದನು ಮತ್ತು ಆಪಾದಿತ ಸಂ.2 ಆಪಾದಿತ ಸಂ.1 ರ ಸಂಬಂಧಿ ಮತ್ತು ಸಾಕ್ಷ್ಯವು ಸ್ಪಷ್ಟವಾಗಿ ತಿಳಿಸುತ್ತದೆ.

13.1 ಮೃತನ ಮತ್ತು ಆಪಾದಿತ ಸಂ.1 ರ ನಡುವಿನ ಸಂಬಂಧ ಅಲ್ಲದೇ ಆಪಾದಿತ ಸಂ.1 ಮತ್ತು ಆತನ ಪತ್ನಿಯೊಂದಿಗಿನ ಸಂಬಂಧ ಸೌಹಾರ್ದಯುತವಾಗಿರಲಿಲ್ಲ ಎಂದು ಸಾಕ್ಷ್ಯಗಳಾದ ಪ್ರಾ.ಸಾ.2, ಪ್ರಾ.ಸಾ.3, ಪ್ರಾ.ಸಾ.4, ಪ್ರಾ.ಸಾ.14 ಮತ್ತು ಪ್ರಾ.ಸಾ.18 ಸುಸ್ತಾಪಿಸುತ್ತದೆ ಎಂದು ಮಾನ್ಯ ವಕೀಲರು ಮುಂದುವರೆದು ವಾದ ಮಂಡಿಸುತ್ತಾರೆ. ಇದು ಒಂದು ನರಹತ್ಯೆಯ ಸಾವು ಎಂಬುದು ಸ್ಪಷ್ಟವಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಪ್ರಾ.ಸಾ.18 ರ ಸಾಕ್ಷ್ಯವು ಸ್ಥಿರವಾಗಿರುತ್ತದೆ. ಆಪಾದಿತನಿಂದ ಆದ ಹಲ್ಲೆಗೆ ಸಂಬಂಧಿಸಿದಂತೆ ನಿಶಾನೆ ಪಿ.7, ನಿಶಾನೆ ಪಿ.10, ನಿಶಾನೆ ಪಿ.11 ಮತ್ತು ನಿಶಾನೆ ಪಿ.12ರಲ್ಲಿ ಉಲ್ಲೇಖಿಸಲಾದ ಮಾಹಿತಿಯು ಸ್ಥಿರವಾಗಿರುತ್ತದೆ. ಆಪಾದಿತನ ನಡವಳಿಕೆಯು ಆತನಿಗೆ ಮೃತನ ಮೇಲೆ ಹಲ್ಲೆ ನಡೆಸುವ ಉದ್ದೇಶವಿತ್ತು ಎಂಬುದನ್ನು ಸ್ಪಷ್ಟವಾಗಿ ತಿಳಿಸುತ್ತದೆ ಮತ್ತು ಆಪಾದಿತ ವ್ಯಕ್ತಿಗಳು ಮೃತನ ತಲೆ ಹಾಗೂ ದೇಹದ ಬಹುಮುಖ್ಯ ಅಂಗಗಳ ಮೇಲೆ ದೊಣ್ಣೆಯಿಂದ (ಮು.ಮೊ.1) ಹಲ್ಲೆ ನಡೆಸಿ ಆತನ ಸಾವಿಗೆ ಕಾರಣರಾಗಿದ್ದಾರೆ ಎಂಬುದನ್ನು ಪ್ರಾ.ಸಾ.3 ರೊಂದಿಗೆ ಸೇರಿಸಲಾದ ಪ್ರಾ.ಸಾ.18 ಮತ್ತು ಇತರೆ ಸಾಂಧರ್ಭಿಕ ಸಾಕ್ಷ್ಯಗಳು ಸ್ಪಷ್ಟವಾಗಿ ಸುಸ್ಥಾಪಿಸುತ್ತವೆ. ಆದ್ದರಿಂದ, ಇಬ್ಬರೂ ಆಪಾದಿತ ವ್ಯಕ್ತಿಗಳು ಪಿತೂರಿಯನ್ನು ಮಾಡಿ ಅಪರಾಧವೆಸಗಿದ್ದಾರೆ ಮತ್ತು ಪ್ರಾಸಿಕ್ಯೂಶನ್ ಪ್ರಸ್ತುತಪಡಿಸಿದ ಮೌಖಿಕ ಹಾಗು ದಸ್ತಾವೇಜು ಸಾಕ್ಷ್ಯಾಧಾರಗಳು ಆಪಾದಿತ ವ್ಯಕ್ತಿಗಳ ಅಪರಾಧವನ್ನು ಸಂದೇಹಾತೀತವಾಗಿ ಸುಸ್ಥಾಪಿಸುತ್ತದೆ. ಆದ್ದರಿಂದ, ಈ ಎಲ್ಲಾ ಆಧಾರದ ಮೇಲೆ, ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ಸಮರ್ಥಿಸಿಕೊಳ್ಳಬೇಕೆಂದು ಕೋರುತ್ತಾ ಸದರಿ ಅಪರಾಧ

ನಿರ್ಣಯದ ತೀರ್ಮಾನಕ್ಕೆ ಯಾವುದೇ ಹಸ್ತಕ್ಷೇಪದ ಅಗತ್ಯವಿರುವುದಿಲ್ಲ ಎಂದು ಮಾನ್ಯ ಹೆಚ್ಚುವರಿ ರಾಜ್ಯ ಸರ್ಕಾರಿ ವಕೀಲರು ನಿವೇದಿಸಿಕೊಂಡಿದ್ದಾರೆ.

14. ಆಕ್ಷೇಪಿತ ತೀರ್ಪಿನ ಅವಗಾಹನೆಯ ನಂತರ ಎರಡೂ ಕಡೆಯವರ ವಾದವನ್ನು ಆಲಿಸಿದ ಮೇಲೆ, ನಾವು ಗಮನಿಸಿದ ಅಂಶಗಳೇನೆಂದರೆ:–

14.1 ಫಿರ್ಯಾದುದಾರ ಮತ್ತು ಮೃತ ಚಿಕ್ಕಯ್ಯನ ಮಗಳೆಂದು ಹೇಳಲಾದ ಪ್ರಾ.ಸಾ.4 ಸುಶೀಲ, ಆಪಾದಿತ ಸಂ.1 ಮಹದೇವ ಅಲಿಯಾಸ್ ಪಾಪಿಯು ಆಕೆಯ ಪತಿಯೆಂದು ತನ್ನ ಸಾಕ್ಷ್ಯದಲ್ಲಿ ಹೇಳಿಕೆ ನೀಡಿರುತ್ತಾಳೆ. ಆಪಾದಿತ ಸಂ.2–ಗೌಡಯ್ಯ ಕೂಡ ಆಕೆಗೆ ಬಲ್ಲವನಾಗಿದ್ದನು, ಮತ್ತು ತನ್ನ ಪತಿಯ ಸಂಬಂಧಿಯಾದ ಪ್ರಾ.ಸಾ.3–ಜವರಯ್ಯ ಆಕೆಯ ಚಿಕ್ಕಪ್ಪನಾಗಿದ್ದು, ಪ್ರಾ.ಸಾ.2–ನೂರಲಮ್ಮ ಆಕೆಯ ತಾಯಿ ಮತ್ತು ಮಾ.ಸಾ.19–ಪುಟ್ಟಿ ಆಕೆಯ ತಂಗಿಯಾಗಿದ್ದು, ಆರು ವರ್ಷಗಳ ಹಿಂದೆ ಆಪಾದಿತ ಸಂ.1 – ಮಹದೇವ ಅಲಿಯಾಸ್ ಪಾಪಿಯೊಂದಿಗೆ ಆಕೆಯ ವಿವಾಹ ನೆರವೇರಿರುತ್ತದೆ. ಆಕೆಯ ವಿವಾಹದ ತರುವಾಯ, ಆಪಾದಿತ ಸಂ.1 ಮನೆಯಳಿಯನಾದ್ದರಿಂದ ಮತ್ತು ತನ್ನ ಪೋಷಕರಿಗೆ ಯಾವುದೇ ಗಂಡು ಸಂತಾನವಿಲ್ಲದ ಕಾರಣದಿಂದ ಆಕೆಯು ಆತನೊಂದಿಗೆ ತನ್ನ ಮನೆಯಲ್ಲಿಯೇ ವಾಸವಿದ್ದಳು. ಒಂದು ವರ್ಷಗಳ ಕಾಲ ಆಪಾದಿತ ಸಂ.1 ಆಕೆಯನ್ನು ಚೆನ್ನಾಗಿಯೇ ನೋಡಿಕೊಂಡಿದ್ದು ಆಕೆಯು ಗರ್ಭಿಣಿಯಾದ ನಂತರ ಆಪಾದಿತ ಸಂ.1 ಮಧ್ಯಪಾನ ಮಾಡಿ ಆಕೆಗೆ ಹಿಂಸೆ ನೀಡಲು ಶುರು ಮಾಡಿದನು. ನಂತರ ಆಪಾದಿತ ಸಂ.1 ಪ್ರಾ.ಸಾ.4 ನ್ನು ಆಕೆಯ ತವರು ಮನೆಯಲ್ಲಿಯೇ ಬಿಟ್ಟು ಆತನು ತನ್ನ ತಾಯಿಯ ಮನೆಯಲ್ಲಿ ವಾಸಿಸಲು ಶುರುಮಾಡಿದನು. ಆಕೆಯ ಪೋಷಕರ ಮನೆಗೆ ಅಂದರೆ ಮೃತ ಚಿಕ್ಕಯ್ಯನ ಮನೆಗೆ ಆಪಾದಿತ ಸಂ.1 ಆಗಾಗ ಬರಲು ಶುರುಮಾಡಿ ಮೃತ ಚಿಕ್ಕಯ್ಯನನ್ನು ತನ್ನ ಪತ್ನಿಯನ್ನು ತನ್ನೊಂದಿಗೆ ಕಳುಹಿಸಿಕೊಡಬೇಕೆಂದು ಕೇಳಿಕೊಂಡನು. ಆ ಕಾರಣದಿಂದ ಕೂಡ, ಆಪಾದಿತನಾದ ಮಹದೇವ ಅಲಿಯಾಸ್ ಪಾಪಿ ಮತ್ತು ಮೃತ ಚಿಕ್ಕಯ್ಯನ ನಡುವೆ ವಾಗ್ವಾದ ನಡೆಯುತ್ತಿತ್ತು. ಆದರೆ, ಇದಕ್ಕೆ ಸಂಬಂಧಿಸಿದಂತೆ, ಯಾವುದೇ ದೂರು ದಾಖಲಾಗಿರುವುದಿಲ್ಲ. ಪ್ರಾ.ಸಾ.2 ಮತ್ತು ಪ್ರಾ.ಸಾ.4 ರ

ಪಾಟೀ–ಸವಾಲಿನಲ್ಲೂ ಕೂಡ ಇದೇ ಹೇಳಿಕೆಯನ್ನು ನೀಡಿರುತ್ತಾರೆ. ಆದಾಗ್ಯೂ, ಪ್ರಾ.ಸಾ.2 ಮತ್ತು ಪ್ರಾ.ಸಾ.4ನ್ನು ಸಂಪೂರ್ಣವಾಗಿ ಪಾಟೀ–ಸವಾಲು ಮಾಡಲಾಗಿ ಅದರಿಂದ ಹೊರಹೊಮ್ಮಿದ ಅಂಶವೇನೆಂದರೆ, ಆಪಾದಿತನಾದ ಮಹದೇವ ಅಲಿಯಾಸ್ ಪಾಪಿ ಮತ್ತು ಮೃತ ಚಿಕ್ಕಯ್ಯನ ನಡುವೆ ನಡೆದ ವಾಗ್ವಾದ ಕುರಿತು ಯಾವುದೇ ವಿವಾದವಿರುವುದಿಲ್ಲ ಎಂಬುದಾಗಿದೆ. ಆಪಾದಿತನು, ಕೆಲಸಕ್ಕೆ ಹೋಗುವ ಸಂದರ್ಭದಲ್ಲಿ ತನ್ನ ಪೋಷಕರ ಮನೆಯ ಮುಂದೆ ಹಾದು ಹೋಗುತ್ತಿದ್ದನು ಎಂದು ಈ ಸಾಕ್ಷಿಯು ತನ್ನ ಪಾಟೀ–ಸವಾಲಿನಲ್ಲಿ ಸ್ಪಷ್ಟವಾಗಿ ಹೇಳಿರುತ್ತಾರೆ. ಆಪಾದಿತ ಸಂ.1 ಹಾಗೆ ಮನೆಯ ಮುಂದೆ ಹಾದು ಹೋಗುವಾಗ, ಈ ಸಾಕ್ಷಿಯು ಆತನೊಂದಿಗೆ ಮಾತನಾಡುತ್ತಿರಲಿಲ್ಲ. ಆದರೆ, ಆಪಾದಿತ ಸಂ.1 ಈ ಸಾಕ್ಷಿಯೊಂದಿಗೆ ಮಾತನಾಡಲು ಪ್ರಯತ್ನಿಸುತ್ತಿದ್ದು ಆಕೆಗೆ ಆತನೊಂದಿಗೆ ಮಾತನಾಡಲು ಒಲವಿರುವುದಿಲ್ಲ. ಘಟನೆಗೂ ಮುಂಚೆ ಆಪಾದಿತ ಸಂ.1ಕ್ಕೆ ಯಾವುದೇ ವಾಗ್ವಾದವಿರಲಿಲ್ಲ ಎಂಬ ಸಲಹೆಯನ್ನು ಆಕೆಯು ನಿರಾಕರಿಸುತ್ತಾಳೆ.

14.2 ಪ್ರಾ.ಸಾ.7–ಸಿದ್ದರಾಜು ಪಂಚ ಸಾಕ್ಷಿಯಾಗಿದ್ದು, ಮೃತ ಚಿಕ್ಕಯ್ಯನ ಬಟ್ಟೆಯನ್ನು ಆತನ ಉಪಸ್ಥಿತಿಯಲ್ಲಿ ವಿಚಾರಣಾ ಅಧಿಕಾರಿಯು ವಶಪಡಿಸಿಕೊಂಡರು ಎಂದು ಹೇಳಲಾದ ನಿಶಾನೆ ಪಿ.4 ಪಂಚನಾಮೆಗೆ ಸಂಬಂಧಿಸಿದವರಾಗಿದ್ದಾರೆ. ಮೃತನಿಗೆ ಸೇರಿದ ಬಟ್ಟೆಗಳಾದ ಅಂಗಿ, ನಿಕ್ಕರ್ ಮತ್ತು ಧೋತಿಯನ್ನು ವಶಪಡಿಸಿಕೊಂಡ ನಿಶಾನೆ ಪಿ.4ಕ್ಕೆ ಸಂಬಂಧಿಸಿದ ಪಂಚ ಸಾಕ್ಷಿಯಾಗಿ ಕಾರ್ಯನಿರ್ವಹಿಸಲು ಯಾರು ಕೂಡ ಆತನಿಗೆ ಸೂಚನೆ ನೀಡಲಿಲ್ಲ ಎಂದು ಆತನು ತನ್ನ ಪಾಟೀ–ಸವಾಲಿನಲ್ಲಿ ಹೇಳಿಕೆ ನೀಡಿರುತ್ತಾನೆ. ಆದ್ದರಿಂದ, ನಾವು ಅಭಿಪ್ರಾಯಪಟ್ಟಂತೆ, ವಾಸ್ತವಾಂಶಗಳಿಗೆ ಆಧಾರ ನೀಡುವುದಕ್ಕೆ ಸಂಬಂಧಿಸಿದಂತೆ, ಸದರಿ ಪಂಚನಾಮೆಯು ಆತನ ಉಪಸ್ಥಿತಿಯಲ್ಲಿ ನಡೆಸಲಾಯಿತೇ ಎಂಬುದು ಸಂಶಯಾಸ್ಪದದಿಂದ ಕೂಡಿದೆ ಎಂದು ಹೇಳಲಾಗುತ್ತದೆ.

14.3 ಮೃತ ಚಿಕ್ಕಯ್ಯನ ಸಂಬಂಧಿಯಾದ ಪ್ರಾ.ಸಾ.8–ಬೆಳ್ಳಯ್ಯ ಹೇಳಿಕೆ ನೀಡಿರುವುದೇನೆಂದರೆ, ಪ್ರಾ.ಸಾ.4–ಸುಶೀಲ ಮೃತ ಚಿಕ್ಕಯ್ಯನ ಮಗಳಾಗಿದ್ದು, ಆಪಾದಿತ ಸಂ.1 ಮಹದೇವ ಅಲಿಯಾಸ್ ಪಾಪಿಯು ಪ್ರಾ.ಸಾ.4ರ ಪತಿ ಮತ್ತು

ಆಪಾದಿತ ಸಂ.2 ಯಾರೆಂದು ಆತನಿಗೆ ಗೊತ್ತಿರುವುದಿಲ್ಲ ಹಾಗೂ ಆತನನ್ನು ನೋಡಿಯೂ ಇರುವುದಿಲ್ಲ ಮತ್ತು ಆಪಾದಿತ ಸಂ.2 ಮತ್ತು ಸುಶೀಲಾರ ನಡುವಿನ ಸಂಬಂಧದ ಬಗ್ಗೆಯೂ ಆತನಿಗೆ ತಿಳಿದಿರುವುದಿಲ್ಲ ಮತ್ತು ಆತನು ಚನ್ನೇಗೌಡನ ಹುಂಡಿಯ ಗ್ರಾಮದಲ್ಲಿ ವಾಸವಾಗಿರುವುದಿಲ್ಲ ಎಂಬುದಾಗಿದೆ. ಎರಡು ವರ್ಷದ ಹಿಂದೆ ಮೃತ ಚಿಕ್ಕಯ್ಯನ ಕೊಲೆಯು ಹೆಚ್.ಡಿ.ಕೋಟೆ ಹ್ಯಾಂಡ್ ಪೋಸ್ಟ್ ಬಳಿ ಸಂಭವಿಸಿದ್ದು ಕೊಲೆಯಾದ ದಿನ ಆತನು ದೇವಲಾಪುರದಲ್ಲಿದ್ದನು ಮತ್ತು ಆತನಿಗೆ ಮೃತ ಚಿಕ್ಕಯ್ಯನ್ನನ್ನು ಯಾರು ಕೊಲೆ ಮಾಡಿದರು ಎಂದು ತಿಳಿದಿರುವುದಿಲ್ಲ. ಆದಾಗ್ಯೂ, ವಿಚಾರಣೆಯ ಸಂದರ್ಭದಲ್ಲಿ ವಿಚಾರಣಾ ಅಧಿಕಾರಿಯು ದಾಖಲು ಮಾಡಿಕೊಂಡ ನಿಶಾನೆ ಪಿ.5ಕ್ಕೆ ಸಂಬಂಧಿಸಿದಂತೆ ಈ ಸಾಕ್ಷಿಯು ತನ್ನ ಹೇಳಿಕೆಗೆ ವಿರೋಧ ತೋರಿದಂತಿರಲಿಲ್ಲ. ಈ ಸಾಕ್ಷಿಯನ್ನು, ಪ್ರತಿಕೂಲ ಸಾಕ್ಷಿಯಂತೆ ನಡೆಸಿಕೊಂಡ ನಂತರ, ಸಂಪೂರ್ಣವಾಗಿ ಪಾಟೀ–ಸವಾಲು ಮಾಡಲಾಗಿದ್ದು, ಯಾವುದೇ ಉಪಯುಕ್ತ ಅಂಶವು ಆತನಿಂದ ಹೊರಬಂದಿರುವುದಿಲ್ಲ. ಮೃತ ಚಿಕ್ಕಯ್ಯನ ಮಗಳೆಂದು ಹೇಳಲಾದ ಪ್ರಾ.ಸಾ.4 ಸುಶೀಲಾಳನ್ನು ಆಪಾದಿತ ಸಂ.1, ವಿವಾಹವಾದ ಆರು ತಿಂಗಳ ನಂತರ ಹಿಂಸಿಸಲು ಶುರುಮಾಡಿದ್ದು ಅದು ಈತನಿಗೆ ತಿಳಿದಿರಲಿಲ್ಲ ಮತ್ತು ಅದೇ ಕಾರಣದಿಂದ ಮೃತನು ಆತನ ಮಗಳನ್ನು ಈತನ ಮನೆಗೆ ಕರೆದುಕೊಂಡು ಬಂದಿದ್ದನು ಎಂದು ಹೇಳಿಕೆ ನೀಡಿರುತ್ತಾನೆ. ಆಪಾದಿತನಿಂದ ಸಂಭವಿಸಿದೆ ಎಂದು ಹೇಳಲಾದ ಘಟನೆಯನ್ನು ತಾನು ನೋಡಿಲ್ಲವಾದ್ದರಿಂದ ಅವರುಗಳ ಸಾಕ್ಷ್ಯವು ಪರಸ್ಪರ ಸ್ಥಿರವಾಗಿರುವುದಿಲ್ಲ.

14.4 ಪ್ರಾ.ಸಾ.10–ಡಾ. ಮಲ್ಲರಾಜು ಎಸ್, ತನ್ನ ಸಾಕ್ಷ್ಯದಲ್ಲಿ ಹೇಳಿರುವುದೇನೆಂದರೆ, ದಿನಾಂಕ: 11.12.2010ರ ರಾತ್ರಿ ಸುಮಾರು 7.15ಕ್ಕೆ ಜವರಯ್ಯ ಎಂಬ ವ್ಯಕ್ತಿಯು ಮೃತನನ್ನು ಹಲ್ಲೆಯ ಮಾಹಿತಿಯೊಂದಿಗೆ ಆಸ್ಪತ್ರೆಗೆ ಕರೆದುಕೊಂಡು ಬಂದಾಗ, ಮೃತನು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದನು ಎಂಬುದಾಗಿದೆ. ಮೃತನನ್ನು ಪರೀಕ್ಷಿಸಿದ ಮೇಲೆ, ಬಲಗಡೆ ಹಣೆಯ ಮೇಲೆ 2 x 1 ಸೆ.ಮೀ. ಅಳತೆಯ ಗಾಯವನ್ನು ಗಮನಿಸಿದ್ದು, ಮೂಗು ಮತ್ತು ಬಾಯಿಯಲ್ಲಿ ರಕ್ತಸ್ರಾವವಾಗಿದ್ದನ್ನು ಡಾ|| ಮಲ್ಲಿರಾಜು ಎಸ್. ಗಮನಿಸಿ ಹೆಚ್ಚಿನ ಚಿಕಿತ್ಸೆಗಾಗಿ ಉತ್ತಮ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಸೂಚಿಸಿದರು.

14.5 ಮೃತ ಚಿಕ್ಕಯ್ಯನ ಮೃತ ದೇಹದ ಶವಪರೀಕ್ಷೆಯನ್ನು ನಡೆಸಿದ ಪ್ರಾ.ಸಾ.11 ಡಾ॥ ಉದಯಶಂಕರರವರು ವೈದ್ಯಕೀಯ ಅಧಿಕಾರಿಯಾಗಿದ್ದು, ತನ್ನ ಸಾಕ್ಷ್ಯದಲ್ಲಿ ಅವರು ವಿಶೇಷವಾಗಿ ಹೇಳಿಕೆ ನೀಡಿರುವುದೇನೆಂದರೆ, ಮೃತನ ಮೃತದೇಹವನ್ನು ಪರೀಕ್ಷಿಸುವಾಗ ಆತನ ಬಲ ಮೊಣಕೈನ ಹೊರಭಾಗದಲ್ಲಿ 3 x 3 ಸೆ.ಮೀ. ಅಳತೆಯ ಸವೆತವನ್ನು ಗಮನಿಸಿರುತ್ತಾರೆ ಎಂಬುದಾಗಿದೆ. ತಲೆಯ ನೆತ್ತಿಯನ್ನು ತುಂಡು ತುಂಡಾಗಿ ಕತ್ತರಿಸಿದಾಗ ಬಲ ಕಿವಿಯ ಹಿಂಭಾಗದ ಕಪೋಲಾಸ್ಥಿಯ ಮೇಲಿನ ಕುರುವಿನಲ್ಲಿ ಬಹಿಃ ಪ್ರವಹಣ ಆಗಿರುವುದನ್ನು ಮತ್ತು ಸಂಪೂರ್ಣ ಪ್ರಮಾಣದ ಲ್ಯಾಮ್ಡ ಹೊಲಿಗೆಯನ್ನು ಒಳಗೊಂಡಂತೆ ಹೊಲಿಗೆಗೆ ಸಂಬಂಧಿಸಿದ ತಲೆಬುರುಡೆಯ ಮತ್ತು ತಲೆಯ ಹಿಂದಿನ ಭಾಗದಲ್ಲಿನ ಮೂಳೆಯು ಮುರಿತವಾಗಿರುವುದನ್ನು ಗಮನಿಸಿರುವುದಾಗಿ ಅವರು ಮುಂದುವರೆದು ಹೇಳಿಕೆ ನೀಡಿದ್ದಾರೆ. ಮಿದುಳಿನ ಬಲ ಗೋಳಾರ್ಧದ ದ್ರವ್ಯದಲ್ಲಿ ಆಂತರಿಕ ರಕ್ತಸ್ರಾವವಾಗಿದ್ದು ಸುತ್ತುವರೆದಿದ್ದ ಜೀವಕೋಶವನ್ನು ಮೃದುಗೊಳಿಸಿ ನಾಶಮಾಡಲಾಗಿತ್ತು ಮತ್ತು ಮೃತನ ಮೇಲಾಗಿದ್ದ ಗಾಯಗಳೂ ಅವರ ಸಾವಿನ ಅಗತ್ಯಕ್ಕೆ ಸಾಕಾದಷ್ಟಾಗಿತ್ತು ಎಂದು ಅವರು ಮುಂದುವರೆದು ಹೇಳುತ್ತಾರೆ. ಅಂತಹ ಗಾಯವು ಆಕಸ್ಮಿಕವಾಗಿ ಬಿದ್ದುದ್ದರಿಂದ ಉಂಟಾಗುವ ಜಡತ್ವದ ಕಾರಣದಿಂದಲೂ ಸಂಭವಿಸಬಹುದು ಎಂದು ತಮ್ಮ ಪಾಟೀ–ಸವಾಲಿನಲ್ಲಿ ವಿಶೇಷವಾಗಿ ಹೇಳಿರುತ್ತಾರೆ. ಅವರು ಮುಂದುವರೆದು ಹೇಳುವುದೇನೆಂದರೆ, 12 ರಿಂದ 15 ಅಡಿ ಮೇಲಿಂದ ಒಬ್ಬ ವ್ಯಕ್ತಿಯು ಕೆಳಗೆ ಬಿದ್ದರೆ ಮಾತ್ರ ಅಂತಹ ಗಾಯವಾಗುತ್ತದೆ ಎಂಬುದಾಗಿದೆ. ಒಂದು ಸಲಹೆ ನೀಡುವುದಕ್ಕೋಸ್ಕರ, ಒಬ್ಬ ವ್ಯಕ್ತಿಯು ಒಂದು ಮರದ ಮೇಲಿಂದ ಬಿದ್ದು, ಬೀಳುವಾಗ ಆತನ ತಲೆಯು ಒಂದು ಕಲ್ಲು ಅಥವಾ ಯಾವುದೇ ಕಠಿಣ ವಸ್ತುವಿಗೆ ತಗುಲಿದಾಗ, ನಿಶಾನೆ ಪಿ.8 ರಲ್ಲಿ ತೋರಿದಂತಹ ಗಾಯವಾಗುತ್ತದೆ ಎಂದು ಹೇಳಿಕೆ ನೀಡಿರುತ್ತಾರೆ. ಆದ್ದರಿಂದ, ಈ ವೈದ್ಯಕೀಯ ಸಾಕ್ಷ್ಯವು, ಪ್ರಾಸಿಕ್ಯೂಷನ್ನಿನ ಯಾವುದೇ ಇತರೆ ಅಧೀನವಲ್ಲದ ಸಾಕ್ಷ್ಯದಿಂದ ರುಜುವಾತಾಗಿರುವುದಿಲ್ಲ ಎಂಬುದು ನಮ್ಮ ಅಭಿಪ್ರಾಯವಾಗಿರುತ್ತದೆ.

14.6 ದಿನಾಂಕ 11.02.2010 ರಂದು ಸಂಜೆ ಸುಮಾರು 6 ಗಂಟೆಗೆ ಆಪಾದಿತನಿಂದ ಮೃತನ ಮೇಲೆ ಹಲ್ಲೆ ನಡೆಸಲಾದ ಮಾಹಿತಿಯೊಂದಿಗೆ ದಿನಾಂಕ 11.02.2010

ರಂದು ರಾತ್ರಿ ಸುಮಾರು 11.55 ಗಂಟೆಗೆ ಮೃತನನ್ನು ಆಸ್ಪತ್ರೆಗೆ ಸೇರಿಸಿಕೊಂಡದ್ದರ ಬಗ್ಗೆ ಪ್ರಾ.ಸಾ.12–ಡಾ. ಲತಾರವರು ಹೇಳಿಕೆಯನ್ನು ನೀಡಿರುತ್ತಾರೆ. ಮೃತನು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದರು ಮತ್ತು ಆತನ ಸ್ಥಿತಿಯು ಹೀನಾಯವಾಗಿದ್ದು ಯಾವುದೇ ನೋವಿನ ಉದ್ದೀಪಕಗಳಿಗೆ ಸ್ಪಂದಿಸುತ್ತಿರಲಿಲ್ಲ ಎಂದು ಅವರು ಮುಂದುವರಿದು ಹೇಳಿರುತ್ತಾರೆ. ನಂತರ, ವಿವೇಕಾನಂದ ಮೆಮೋರಿಯಲ್ ಆಸ್ಪತ್ರೆಯಿಂದ ಹೆಚ್.ಡಿ. ಕೋಟೆಗೆ ರೋಗಿಯನ್ನು ರವಾನಿಸಲು ಸೂಚಿಸಲಾಯಿತು ಮತ್ತು ಅಲ್ಲಿಂದ ರೋಗಿಯನ್ನು ತಮ್ಮ ಆಸ್ಪತ್ರೆಗೆ ಕರೆತರಲಾಯಿತು. ಮೃತನನ್ನು ಪರೀಕ್ಷಿಸಿದ ಮೇಲೆ, ಆತನ ಬಲಭಾಗದ ಮೂಗು ಮತ್ತು ಬಾಯಿ, ಬಲಭಾಗದ ಕಪ್ಪು ಕಣ್ಣಿನ ಮೂಲಕ ರಕ್ತಸ್ರಾವ ಆಗುತ್ತಿರುವುದನ್ನು ಮತ್ತು ಬಲ ಕೆನ್ನೆಯ ಮೇಲೆ, ರಕ್ತ ಹೆಪ್ಪುಗಟ್ಟುವಿಕೆಯು ಒಳಗೊಂಡಂತಹ, 3 x 4 ಸೆ.ಮೀ. ಅಳತೆಯ ಸವೆತವನ್ನು ಮತ್ತು 3 ಸೆ.ಮೀ. ಅಳತೆಯ ಊತವು ಮೃತನ ಬಲ ಭಾಗದ ಹಣೆಯಲ್ಲಾಗಿರುವುದನ್ನು ಅವರು ಗಮನಿಸಿರುತ್ತಾರೆ. ಪರೀಕ್ಷಿಸಿದ ನಂತರ, ಅವರು ಎಮ್.ಎಲ್.ಸಿ ನೋಂದಣಿ ಪುಸ್ತಕದಲ್ಲಿ ದಾಖಲಿಸಿಕೊಂಡರು.

14.7 ಪ್ರಾ.ಸಾ.13–ಡಾ. ಎಸ್.ಆರ್. ಅನಂತ್‌ಕುಮಾರ್‌ರವರು ವಿವೇಕಾನಂದ ಮೆಮೋರಿಯಲ್ ಆಸ್ಪತ್ರೆಯಲ್ಲಿ ಆರ್.ಎಮ್.ಓ ಆಗಿ ಕಾರ್ಯನಿರ್ವಹಿಸುತ್ತಿದ್ದರು ಎಂದು ತಮ್ಮ ಸಾಕ್ಷ್ಯದಲ್ಲಿ ಹೇಳಿಕೆ ನೀಡಿರುತ್ತಾರೆ. ದಿನಾಂಕ: 11.02.2010 ರಂದು, ಆಪಾದಿತ ಸಂ.1–ಮಹದೇವನಿಂದ ಹಲ್ಲೆಗೊಳಗಾದ ಮಾಹಿತಿಯೊಂದಿಗೆ ಮೃತ ಚಿಕ್ಕಯ್ಯನನ್ನು ಆತನ ಮಗಳು ಆಸ್ಪತ್ರೆಗೆ ಕರೆತಂದಿದ್ದು ಆತನು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದನು. ಆತನ ನೆತ್ತಿಯಲ್ಲಿ ಗಂಭೀರವಾಗಿ ಗಾಯಗೊಂಡಿದ್ದು ಆತನನ್ನು ಉತ್ತಮ ಆಸ್ಪತ್ರೆಗೆ ಕರೆದೊಯ್ಯಲು ಸೂಚಿಸಲಾಯಿತು ಮತ್ತು ಗಾಯದ ಪ್ರಮಾಣ ಪತ್ರ ಮತ್ತು ಬಿಡುಗಡೆಯ ಸಾರಾಂಶವನ್ನು ನಿಶಾನೆ ಪಿ.11 ಮತ್ತು ಪಿ.12 ಎಂದು ಗುರುತುಮಾಡಿದ್ದು, ಸಾಕ್ಷಿಗಳ ಸಹಿಯನ್ನು ನಿಶಾನೆ ಪಿ.11(ಎ) ಮತ್ತು 12(ಎ) ಎಂದು ಗುರುತುಮಾಡಲಾಗಿದೆ ಎಂದು ಹೇಳಿಕೆ ನೀಡಿರುತ್ತಾರೆ. ಕೆಲವು ವ್ಯಕ್ತಿಗಳು ರೋಗಿಯ ಮಗಳೊಂದಿಗೆ ಬಂದಿದ್ದರು ಆದರೆ ಅವರ್‍ಯಾರು ಎಂದು ಆತನಿಗೆ ಗೊತ್ತಿರುವುದಿಲ್ಲ ಮತ್ತು ರೋಗಿಯು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದರಿಂದ

ಆತನಿಗೆ ಮಾತನಾಡಲಾಗಲಿಲ್ಲ ಮತ್ತು ಆತನನ್ನು ಓ.ಪಿ.ಡಿ.ಗೆ ಕರೆದೊಯ್ಯಲಾಗಿ, ಹೇಗೆ ಆತನನ್ನು ಆಸ್ಪತ್ರೆಗೆ ಕರೆತರಲಾಯಿತು ಎಂದು ಆತನಿಗೆ ಅರಿವಿರುವುದಿಲ್ಲವೆಂದು ತಮ್ಮ ಪಾಟೀ–ಸವಾಲಿನಲ್ಲಿ ವಿಶೇಷವಾಗಿ ಹೇಳಿರುತ್ತಾರೆ. ರೋಗಿಯನ್ನು ಆಸ್ಪತ್ರೆಗೆ ಸಂಜೆ ಸುಮಾರು 6 ಗಂಟೆಗೆ ಕರೆತರಲಾಗಿ ಆತನನ್ನು ಆಸ್ಪತ್ರೆಯಲ್ಲಿ ಸುಮಾರು 15 ನಿಮಿಷ ಪರೀಕ್ಷಿಸಲಾಯಿತು ಮತ್ತು ಉತ್ತಮ ಆಸ್ಪತ್ರೆಗೆ ಕಳುಹಿಸುವಂತೆ ಸೂಚಿಸಿದ್ದು, ನೆತ್ತಿಯಲ್ಲಿ ಯಾವುದೇ ರೀತಿಯ ರಕ್ತಸ್ರಾವವನ್ನು ವೈದ್ಯರು ಗಮನಿಸಿರುವುದಿಲ್ಲ. ಬಹುಶಃ ಅದು ಆಂತರಿಕ ತಲೆಬುರುಡೆಯ ರಕ್ತಸ್ರಾವವಾಗಿದ್ದು, ಪೋಲೀಸರಿಗೆ ಎಮ್.ಎಲ್.ಸಿ.ಯ ಬಗ್ಗೆ ಆಸ್ಪತ್ರೆಯವರು ಸೂಚನೆ ನೀಡಿದರೋ ಇಲ್ಲವೋ ಎಂದು ತಮಗೆ ತಿಳಿದಿರುವುದಿಲ್ಲ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ, ಪ್ರಾಸಿಕ್ಯೂಶನ್ನಿನ ಈ ಎಲ್ಲಾ ವೈದ್ಯಕೀಯ ಸಾಕ್ಷ್ಯಗಳು, ಮುಖ್ಯ ಸಾಕ್ಷಿಗಳ ಸಾಕ್ಷ್ಯಾಧಾರಗಳಾದ ಪ್ರಾ.ಸಾ.2 ಮತ್ತು ಪ್ರಾ.ಸಾ.4ರ ವಿರುದ್ಧವಾಗಿದೆ ಎಂಬುದು ನಮ್ಮ ಅಭಿಪ್ರಾಯವಾಗಿರುತ್ತದೆ.

14.8 ಪ್ರಾ.ಸಾ.14 – ಜವರಮ್ಮ ಮೃತನ ತಾಯಿಯಾಗಿದ್ದು, ಆಕೆಯು ಹೇಳಿರುವುದೇನೆಂದರೆ, ಆಪಾದಿತ ಸಂ.1 ಮಹದೇವ ಪ್ರಾ.ಸ.4–ಸುಶೀಲಾಳ ಪತಿಯಾಗಿದ್ದು, ವಿವಾಹದ ನಂತರ ಆಪಾದಿತ ಸಂ.1 ಸುಶೀಲಾಳನ್ನು ಬಿಟ್ಟು ತನ್ನ ತಾಯಿಯ ಮನೆಗೆ ಹೋಗಿದ್ದು, ಸುಶೀಲಾ ತನ್ನ ತಂದೆಯೊಂದಿಗೆ ವಾಸಿಸುತ್ತಿದ್ದಳು. ಆಕೆಯ ಆರೋಗ್ಯ ಸ್ಥಿತಿ ಚೆನ್ನಾಗಿಲ್ಲದ್ದರಿಂದ, ಮೃತನು ಆಕೆಯನ್ನು ನೋಡಲು ಬರುತ್ತಿದ್ದನು ಮತ್ತು ಆಪಾದಿತ ಸಂ.1 ಮತ್ತು 2 ಸಹಾ ಆಕೆಯ ಮನೆಯ ಹತ್ತಿರ ಬಂದಿದ್ದು ಮೃತನು ಹೊರಟು ಹೋಗಿದ್ದನು ಮತ್ತು ಆಪಾದಿತ ಸಂ.1 ಮತ್ತು 2 ಆತನನ್ನು ಹಿಂಬಾಲಿಸಿದರು ಎಂಬುದಾಗಿದೆ. ಪ್ರಾಸಿಕ್ಯೂಶನ್ನಿನ ವಾದಕ್ಕೆ ಆಕೆಯು ಪ್ರತಿಕೂಲ ಸಾಕ್ಷಿಯಾಗಿ ಬದಲಾಗಿದ್ದು, ಆಕೆಯ ಸಾಕ್ಷ್ಯವು ಪ್ರಾಸಿಕ್ಯೂಶನ್ನಿನ ಯಾವ ಮಟ್ಟಿನ ಪ್ರಯೋಜನಕ್ಕೂ ಬರುವುದಿಲ್ಲ.

14.9 ಪ್ರಾ.ಸ.16–ಪೇದೆಯು ಎಫ್.ಐ.ಆರ್ ದಾಖಲುಮಾಡಿದ್ದಕ್ಕೆ ಸಂಬಂಧಿಸಿದಂತೆ ಹೇಳಿಕೆ ನೀಡಿದ್ದಾರೆ ಮತ್ತು ಪ್ರಾ.ಸಾ.17–ರಂಗಸ್ವಾಮಿಯು ಪಂಚನಾಮೆಗಿನ ತಯಾರಿ

ಮತ್ತು ವಸ್ತ್ರ ವಶಪಡಿಸುವಿಕೆಯ ಪಂಚನಾಮೆಗೆ ಸಂಬಂಧಿಸಿದಂತೆ ಹೇಳಿಕೆ ನೀಡಿರುತ್ತಾರೆ, ಆದರೆ ಆತನ ಸಾಕ್ಷ್ಯವನ್ನು ಸವಾಲು ಮಾಡಿರುವುದಿಲ್ಲ.

14.10 ಆಪಾದಿತ ಸಂ.1 ಮತ್ತು 2ರ ಹಲ್ಲೆಯ ಘಟನೆಗೆ ಪ್ರ.ಸಾ.18–ಮಹೇಶ ಪ್ರತ್ಯಕ್ಷ ಸಾಕ್ಷಿಯಾಗಿರುತ್ತಾನೆ. ಆತನು ತನ್ನ ಸಾಕ್ಷ್ಯದಲ್ಲಿ ವಿಶೇಷವಾಗಿ ಹೇಳಿರುವುದೇನೆಂದರೆ, ಮೃತನು ಆತನ ಸಂಬಂಧಿಯಾಗಿದ್ದು, ಆಪಾದಿತ ಸಂ.1 ಕೂಡ ಆತನ ಸಂಬಂಧಿಯಾಗಿರುತ್ತಾನೆ ಮತ್ತು ಮೃತನ ಮಗಳಾದ ಸುಶೀಲಾಳನ್ನು ಆಪಾದಿತ ಸಂ.1ರೊಂದಿಗೆ ವಿವಾಹ ಮಾಡಿಕೊಡಲಾಗಿದ್ದು ಅವರ ಸಂಬಂಧ ಸೌಹಾರ್ದಯುತವಾಗಿರುವುದಿಲ್ಲ ಎಂಬುದಾಗಿದೆ. ಮುಂದುವರೆದು, ಆಪಾದಿತ ಸಂ.1 ತನ್ನ ತಾಯಿಯೊಂದಿಗೆ ಮಂಟೆಹಾಡಿ ಗ್ರಾಮದಲ್ಲಿ ವಾಸವಾಗಿದ್ದು, ತನ್ನ ಪತ್ನಿ ಸುಶೀಲಾಳಿಗೆ ಸಂಬಂಧಿಸಿದಂತೆ ಮೃತನೊಂದಿಗೆ ಜಗಳವಾಡುತ್ತಿದ್ದನು. ಹಲ್ಲೆ ನಡೆದ ದಿನ, ತಾನು ತನ್ನ ಪತ್ನಿ ಮತ್ತು ಮಕ್ಕಳೊಂದಿಗೆ ಹ್ಯಾಂಡ್ ಪೋಸ್ಟ್ ಕಡೆಗೆ ಹೋಗುತ್ತಿದ್ದು ಮೃತ ಚಿಕ್ಕಯ್ಯ, ಆತನನ್ನು ಹಿಂಬಾಲಿಸುತ್ತಿದ್ದನು ಮತ್ತು ಆ ಸಮಯದಲ್ಲಿ, ಆಪಾದಿತನು ಮೃತನ ಮೇಲೆ ದೊಣ್ಣೆಯಿಂದ ಹಲ್ಲೆ ನಡೆಸಿ ಓಡಿ ಹೋಗಿದ್ದು ಆತನನ್ನು ಹಿಂಬಾಲಿಸಿದರೂ ಆತನ ಜಾಡನ್ನು ಹಿಡಿಯಲಾಗಲಿಲ್ಲ ಎಂದು ಪ್ರಾ.ಸಾ.18–ಮಹೇಶ ಮುಂದುವರೆದು ಹೇಳುತ್ತಾನೆ. ನಂತರ ಆತನು ಆಂಬುಲೆನ್ಸ್ ಕರೆದು ಗಾಯಾಳುವನ್ನು ಆಸ್ಪತ್ರೆಗೆ ರವಾನಿಸಿದನು. ತುಂಬಾ ಜನ ಗ್ರಾಮಸ್ಥರು ಅಲ್ಲಿದ್ದರಿಂದ ಗುರುತು ಹಿಡಿಯಲು ಸಾಧ್ಯವಾಗಿರುವುದಿಲ್ಲ ಎಂಬ ಸೂಚನೆಯನ್ನು ಪಾಟೀ–ಸವಾಲಿನಲ್ಲಿ ಮಾಡಿದಾಗ ಆತನು ಅದನ್ನು ನಿರಾಕರಿಸಿದನು. ಘಟನೆಯ ನಂತರ ಆತನು ಘಟನಾಸ್ಥಳಕ್ಕೆ ಹೋಗಿದ್ದಾನೆ ಎಂಬ ಸೂಚನೆಯನ್ನು ಆತ ನಿರಾಕರಿಸಿದ್ದಾರೆ.

14.11 ಪ್ರಾ.ಸಾ.19 – ಮಲ್ಲಿಕ್, ಹೆಚ್.ಡಿ. ಕೋಟೆಯ ಸರ್ಕಲ್ ಇನ್ಸ್‌ಪೆಕ್ಟರ್ ಆಗಿದ್ದು ದಿನಾಂಕ: 13.02.2010 ರಂದು ಮುಂದುವರೆದು ವಿಚಾರಣೆಯನ್ನು ಕೈಗೆತ್ತಿಕೊಂಡು ನಿಶಾನೆ ಪಿ.1ರ ಮೇರೆಗೆ ಪಂಚನಾಮೆಯನ್ನು ನಡೆಸಿ, ಆಪಾದಿತನನ್ನು ಬಂಧಿಸಿ ಕಮ್ಮಿಟಲ್ ನ್ಯಾಯಾಲಯದ ಮುಂದೆ ದೋಷಾರೋಪಣ ಪಟ್ಟಿಯನ್ನು

ಸಲ್ಲಿಸಿರುತ್ತಾರೆ. ಪ್ರಾ.ಸಾ.20 – ವಿಷಕಂಠ ಹೆಚ್.ಡಿ. ಕೋಟೆ ಪೊಲೀಸ್ ಠಾಣೆಯ ಮುಖ್ಯ ಪೇದೆಯಾಗಿರುತ್ತಾರೆ. ದಿನಾಂಕ 11.02.2010 ರಂದು ಅವರು ಎಸ್.ಹೆಚ್.ಓ ಆಗಿ ಕಾರ್ಯ ನಿರ್ವಹಿಸುತ್ತಿರುವಾಗ ವಿವೇಕಾನಂದ ಮೆಮೋರಿಯಲ್ ಆಸ್ಪತ್ರೆಯಿಂದ ಒಂದು ದೂರವಾಣಿ ಕರೆ ಬಂದಿದ್ದು ಅದರಲ್ಲಿ ಮೃತ ಚಿಕ್ಕಯ್ಯನ ಚಿಕಿತ್ಸೆಯ ಮಾಹಿತಿಯನ್ನು ನೀಡಿರುತ್ತಾರೆ ಮತ್ತು ಆತನು ಆಸ್ಪತ್ರೆಗೆ ಹೋಗಿ ನಿಶಾನೆ ಪಿ.25 ಆದ ಹೇಳಿಕೆಯನ್ನು ದಾಖಲು ಮಾಡಿಕೊಳ್ಳಲು ಮನವಿಯನ್ನು ನೀಡಿರುತ್ತಾರೆ. ಆದರೆ ನಿಶಾನೆ ಪಿ.11 ರ ಪ್ರಕಾರ ಮೃತನು ಮಾತನಾಡುವ ಪರಿಸ್ಥಿತಿಯಲ್ಲಿಲ್ಲ ಎಂದು ವೈದ್ಯರು ಹಿಂಬರಹವನ್ನು ನೀಡಿರುತ್ತಾರೆ. ಪ್ರಾ.ಸಾ.21–ಶಿವಣ್ಣ ಹೆಚ್.ಡಿ. ಕೋಟೆ ಪೊಲೀಸ್ ಠಾಣೆಯ ಪಿ.ಎಸ್.ಐ ಆಗಿದ್ದು ದಿನಾಂಕ: 12.02.2010 ರಂದು ಮೃತನು ಕೆ.ಆರ್.ಆಸ್ಪತ್ರೆಗೆ ದಾಖಲಾದ ಬಗ್ಗೆ ಮಾಹಿತಿಯನ್ನು ದೂರವಾಣಿಯ ಮೂಲಕ ಪಡೆದಿರುತ್ತಾರೆ ಮತ್ತು ಅದೇ ದಿನ ಸಂಜೆ ಮರಣ ಪತ್ರವನ್ನು ಅವರು ಪಡೆದುಕೊಂಡಿರುತ್ತಾರೆ. ಸಂಜೆ ಸುಮಾರು 5.45 ಗಂಟೆಗೆ ನಿಶಾನೆ ಪಿ.3 ರಲ್ಲಿ ಒಂದು ದೂರನ್ನು ಅವರು ಪಡೆದಿದ್ದು ಅದನ್ನು ಭಾರತ ದಂಡ ಸಂಹಿತೆಯ ಪ್ರಕರಣ 302, 201 ರ ಅಡಿಯಲ್ಲಿ, ನಿಶಾನೆ ಪಿ.16ರ ಪ್ರಕಾರ ಎಫ್.ಐ.ಆರ್ ಅನ್ನು ದಾಖಲು ಮಾಡಿದರು.

15. ಈ ಸಂದರ್ಭದಲ್ಲಿ, ಗಮನಿಸಬಹುದಾದ ಪ್ರಸಕ್ತ ಅಂಶವೆಂದರೆ, ಅಪರಾಧ ನಡೆದ ಸ್ಥಳಕ್ಕೆ ಸಂಬಂಧಿಸಿದಂತೆ, ಅಪರಾಧ ನಡೆದ ಸ್ಥಳದ ಸಮೀಪದಲ್ಲಿ ಪ್ರಾ.ಸಾ.28–ಮಹೇಶನ ಉಪಸ್ಥಿತಿಯು ಅನುಮನಾಸ್ಪದವಾಗಿರುತ್ತದೆ ಎಂಬುದಾಗಿದೆ. ಹ್ಯಾಂಡ್ ಪೋಸ್ಟ್‌ನಿಂದ ಸ್ವಲ್ಪ ದೂರದಲ್ಲಿರುವ, ಜವರಯ್ಯ ಎಂಬುವನಿಗೆ ಸೇರಿದ ಭೂಮಿಯ ಬದುವಿನ ಮೇಲೆ ಆ ಘಟನೆಯು ಸಂಭವಿಸಿದ್ದು ಅದರ ಪಕ್ಕದಲ್ಲಿ ಒಂದು ಕಬ್ಬಿನ ಗದ್ದೆಯಿರುತ್ತದೆ. ಆದರೆ, ಆಪಾದಿತನ ಅಪರಾಧವನ್ನು ಸಂದೇಹಾತೀತವಾಗಿ ರುಜುವಾತುಪಡಿಸಲು ಇರುವ ಪ್ರಾಸಿಕ್ಯೂಷನ್ ಸಾಕ್ಷಕ್ಕೆ ಸಂಬಂಧಿಸಿದಂತೆ, ಪ್ರಾ.ಸಾ.19 ರಿಂದ ತಯಾರಾದ ರೇಖಾಚಿತ್ರದಲ್ಲಿ ಕೆಲವು ಮರೆಮಾಚುವ ಅಂಶವಿರುತ್ತದೆ. ಆದ್ದರಿಂದ, ದಾಖಲಾಗಿರುವ ಸಂಪೂರ್ಣ ಸಾಕ್ಷ್ಯಗಳ ಮರು–ಪರಿಶೀಲನೆ ಮತ್ತು ಮರು–ಮೌಲ್ಯಮಾಪನದ ಅಗತ್ಯವಿದೆ ಎಂಬುದು

ನಮ್ಮ ಅಭಿಪ್ರಾಯವಾಗಿರುತ್ತದೆ. ನಿಶಾನೆ ಪಿ.7, ಪಿ.8 ಮತ್ತು ನಿಶಾನೆ ಪಿ.10 ರ ದಸ್ತಾವೇಜುಗಳು ಪ್ರಾಸಿಕ್ಯೂಶನ್ನಿಗೆ ಸ್ವಾಭಾವಿಕವಾಗಿ ಬಹುಮುಖ್ಯವಾಗಿದ್ದು, ಪ್ರಾ.ಸ.10– ಡಾ॥ ಮಲ್ಲರಾಜು, ಪ್ರಾ.ಸಾ.11 – ಡಾ॥ ಉದಯಶಂಕರ ಮತ್ತು ಪ್ರಾ.ಸಾ.12 – ಡಾ॥ ಲತಾರವರ ಸಾಕ್ಷ್ಯಗಳು ಇದಕ್ಕೆ ಸಂಬಂಧಿಸಿದ್ದು, ಇತರ ಸಾಕ್ಷ್ಯಗಳಾದ ಪ್ರಾ.ಸಾ.2, ಪ್ರಾ.ಸಾ.4 ಮತ್ತು ಪ್ರಾ.ಸಾ.18 ರೊಂದಿಗೆ ಪರಿಶೀಲನೆ ಮಾಡಬೇಕಿರುತ್ತದೆ.

16. ಆದರೆ, ಆಪಾದಿತ ಸಂ.1, ಮೃತ ಚಿಕ್ಕ ಅಲಿಯಾಸ್ ಚಿಕ್ಕಯ್ಯನ ಮೇಲೆ ಮು.ಮೊ.1 ರಿಂದ (ದೊಣ್ಣೆ) ಆತನ ಬಹುಮುಖ್ಯ ಅಂಗವಾದ ತಲೆ ಮೇಲೆ ಹಲ್ಲೆ ನಡೆಸಿದ್ದಾರೆಯೇ ಮತ್ತು ಆಪಾದಿತ ಸಂ.2 ಆತನನ್ನು ಕೊಲ್ಲುವ ಉದ್ದೇಶದಿಂದ ಆತನ ಗುಪ್ತಾಂಗಕ್ಕೆ ಒದ್ದಿದ್ದಾನೆಯೇ ಎಂಬುದನ್ನು ಈ ಅಪೀಲಿನಲ್ಲಿ ಮಂಡಿಸುವ ಅಗತ್ಯವಿರುತ್ತದೆ.

17. ಮೃತ ಚಿಕ್ಕ ಅಲಿಯಾಸ್ ಚಿಕ್ಕಯ್ಯನ ಸಾವಿಗೆ ಸಂಬಂಧಿಸಿದಂತೆ ಯಾವುದೇ ವಿವಾದವಿರುವುದಿಲ್ಲ. ಆದರೆ, ಆಪಾದಿತನಾದ ಮಹದೇವ ಅಲಿಯಾಸ್ ಪಾಪಿಯು ತನ್ನ ಮಾವನ ಮೇಲೆ ಮು.ಮೊ.1 ರಿಂದ (ದೊಣ್ಣೆ) ಆತನ ತಲೆಯ ಬಹುಮುಖ್ಯ ಭಾಗದ ಮೇಲೆ ಹಲ್ಲೆ ನಡೆಸಿದ್ದಾರೆಯೇ ಮತ್ತು ಆಪಾದಿತ ಸಂ.2 ಆತನ ಅಂಡಾಶಯದ ಬಹುಮುಖ್ಯ ಭಾಗಕ್ಕೂ ಸಹ ಒದ್ದಿರುತ್ತಾನೆಯೇ ಎಂಬುದನ್ನು ವೈದ್ಯಕೀಯ ಸಾಕ್ಷ್ಯಗಳೊಂದಿಗೆ ದೋಷಿ ಎಂದು ನಿರ್ಣಯಿಸಲು ಅಧಿವಿಚಾರಣಾ ನ್ಯಾಯಾಲಯವು ಪರಿಶೀಲನೆ ಮಾಡಬೇಕಿದೆ ಎಂಬುದರಲ್ಲಿ ವಿವಾದವಿರುತ್ತದೆ.

18. ನಿಶಾನೆ ಪಿ.1 ಪಂಚನಾಮೆ ಮಹಜ಼ರ್, ನಿಶಾನೆ ಪಿ.2 ಸ್ಥಳ ಪಂಚನಾಮೆ, ನಿಶಾನೆ ಪಿ.3 ದೂರು, ನಿಶಾನೆ ಪಿ.4 ಜಪ್ತಿ ಮಹಜ಼ರ್, ನಿಶಾನೆ ಪಿ.8 ಮರಣೋತ್ತರ ಪರೀಕ್ಷೆಯ ವರದಿ, ನಿಶಾನೆ ಪಿ.11 ಗಾಯ ಪ್ರಮಾಣಪತ್ರ, ನಿಶಾನೆ ಪಿ.12 ಆಸ್ಪತ್ರೆಯ ಬಿಡುಗಡೆಯ ಸಾರಾಂಶ, ನಿಶಾನೆ ಪಿ.16 ಪ್ರಥಮ ವರ್ತಮಾನ ವರದಿ, ನಿಶಾನೆ ಪಿ.17 ರೇಖಾಚಿತ್ರ, ನಿಶಾನೆ ಪಿ.18 ರಿಂದ ಪಿ.23 ಛಾಯಚಿತ್ರಗಳು ಮತ್ತು ನಿಶಾನೆ ಪಿ.28 ಮರಣಪತ್ರವಾಗಿರುತ್ತದೆ. ಈ ನಿಶಾನೆಗಳಿಗೆ ಸಂಬಂಧಿಸಿದಂತೆ

ಸಾಕ್ಷಿಗಳ ಸಾಕ್ಷ್ಯಾಧಾರಗಳ ಪೂರ್ಣತೆಯಲ್ಲಿ, ಪ್ರಾಸಿಕ್ಯೂಶನ್ ಯೋಜಿಸಲಾದ ಪ್ರಕರಣವು ಮರೆಮಾಚುವಂತೆ ಕಂಡುಬರುತ್ತದೆ. ಸದರಿ ದಸ್ತಾವೇಜುಗಳನ್ನು ಮತ್ತು ಮೌಖಿಕ ಸಾಕ್ಷ್ಯಗಳನ್ನು ಸಹ ಮರು–ಮೌಲ್ಯಮಾಪನ ಮಾಡಬೇಕೆಂಬುದು ಅಪೀಲುದಾರರ ಪರ ಮಾನ್ಯ ವಕೀಲರ ವಾದವಾಗಿರುತ್ತದೆ.

19. ಮು.ಮಾ.1 ಆದ ದೊಣ್ಣೆಯನ್ನು ಆಪಾದಿತ ಸಂ.1–ಮಹದೇವ ಅಲಿಯಾಸ್ ಪಾಪಿಯು ಮೃತ ಚಿಕ್ಕ ಅಲಿಯಾಸ್ ಚಿಕ್ಕಯ್ಯನ ದೇಹದ ಬಹುಮುಖ್ಯ ಭಾಗಗಳ ಮೇಲೆ ಹಲ್ಲೆ ಮಾಡಲು ಉಪಯೋಗಿಸಿದ್ದು, ಮಾರಕವಾದ ಗಾಯಗಳಿಗೆ ಕಾರಣವಾಗಿ ಆತನ ಮರಣಕ್ಕೂ ಕಾರಣವಾಗಿರುತ್ತದೆ. ಪ್ರಾ.ಸಾ.12 ಲತಾ ತಮ್ಮ ಸಾಕ್ಷ್ಯದಲ್ಲಿ ಹೇಳಿರುವುದೇನೆಂದರೆ, ದಿನಾಂಕ 11.02.2010 ರಂದು, ಹಲ್ಲೆಗೊಳಗಾದ ಮಾಹಿತಿಯೊಂದಿಗೆ, ಮೃತನನ್ನು ಹೆಚ್.ಡಿ. ಕೋಟೆ ಆಸ್ಪತ್ರೆಗೆ ದಾಖಲಿಸಿದ್ದು, ನಂತರ ವಿವೇಕಾನಂದ ಮೆಮೋರಿಯಲ್ ಆಸ್ಪತ್ರೆಗೆ ಮತ್ತು ತದನಂತರ ಕೆ.ಆರ್. ಆಸ್ಪತ್ರೆ, ಮೈಸೂರು, ಇಲ್ಲಿಗೆ ದಾಖಲಿಸಲಾಗಿದೆ ಎಂಬುದಾಗಿದೆ. ಮೃತನನ್ನು, ಆಪಾದಿತ ಸಂ.1 ರಿಂದ ಹಲ್ಲೆಗೊಳಗಾದ ಮಾಹಿತಿಯೊಂದಿಗೆ, ವಿವೇಕಾನಂದ ಮೆಮೋರಿಯಲ್ ಆಸ್ಪತ್ರೆಗೆ ಕರೆತಂದಿದ್ದು, ಪ್ರಥಮ ಚಿಕಿತ್ಸೆಯನ್ನು ನೀಡಿದ ನಂತರ, ಮೃತನನ್ನು ಹೆಚ್ಚಿನ ಚಿಕಿತ್ಸೆಗೆ ಶಿಫಾರಸು ಮಾಡಲಾಯಿತು ಎಂದು ಪ್ರಾ.ಸಾ.13 ತನ್ನ ಸಾಕ್ಷ್ಯದಲ್ಲಿ ವಿಶೇಷವಾಗಿ ಹೇಳಿಕೆ ನೀಡಿರುತ್ತಾರೆ. ತದನುಸಾರ, ಮೃತನನ್ನು ಕೆ.ಆರ್. ಆಸ್ಪತ್ರೆಗೆ ಕರೆತಂದಿದ್ದು, ಚಿಕಿತ್ಸೆ ನೀಡುತ್ತಿದ್ದ ಸಂದರ್ಭದಲ್ಲಿ ಕೊನೆಯುಸಿರೆಳೆದಿರುತ್ತಾರೆ. ಆದರೆ ಘಟನೆಯ ಸದರಿ ಮಾಹಿತಿಗೆ ಸಂಬಂಧಿಸಿದಂತೆ ಪ್ರಾಸಿಕ್ಯೂಶನ್‌ನಿಂದ ಯಾವುದೇ ಸಕಾರಾತ್ಮಕವಾದ ಸಾಕ್ಷ್ಯವನ್ನು ಪ್ರಸ್ತುತ ಪಡಿಸಿರುವುದಿಲ್ಲ.

20. ಆದಾಗ್ಯೂ, ತನ್ನ ಪ್ರಕರಣವನ್ನು ರುಜುವಾತುಪಡಿಸುವುದಕ್ಕೋಸ್ಕರ, ಪ್ರಾಸಿಕ್ಯೂಶನ್ ಎಲ್ಲಾ 21 ಸಾಕ್ಷಿಗಳನ್ನು ವಿಚಾರಣೆಮಾಡಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ, ಪ್ರಾ.ಸಾ.2, ಪ್ರಾ.ಸಾ.3, ಪ್ರಾ.ಸಾ.4, ಪ್ರಾ.ಸಾ.18 ಮತ್ತು ಮೃತ ಚಿಕ್ಕ ಅಲಿಯಾಸ್ ಚಿಕ್ಕಯ್ಯ ಮತ್ತು ಆಪಾದಿತ ಸಂ.1 ಮಹದೇವ ಅಲಿಯಾಸ್ ಪಾಪಿಯ ನಡುವಿನ

ಸಂಬಂಧವನ್ನು ಸುಸ್ಥಾಪಿಸುವ ಪ್ರಾ.ಸಾ.18 ಮತ್ತು ಆಪಾದಿತ ಸಂ.1 ಮಹದೇವ ಅಲಿಯಾಸ್ ಪಾಪಿಯ ಪತ್ನಿಯಾದ ಪ್ರಾ.ಸಾ.4 ಸುಶೀಲಾಳ ಸಾಕ್ಷ್ಯಗಳು ನಿರ್ಬಂಧದಾಯಕವಾಗಿರುತ್ತದೆ. ಸಾಕ್ಷ್ಯಗಳು ಮುಂದುವರೆದು ಹೇಳಿಕೆ ನೀಡಿರುವುದೇನೆಂದರೆ, ದಿನಾಂಕ: 11.02.2010 ರಂದು ಮೃತನು ತನ್ನ ತಾಯಿಯ ಮನೆಗೆ ಹೋದಾಗ ಆಪಾದಿತ ವ್ಯಕ್ತಿಗಳು ಅಲ್ಲಿ ಉಪಸ್ಥಿತರಿದ್ದು ಕೆಲ ಮಾತಿನ ಚಕಮಕಿ ನಡೆದಿರುತ್ತದೆ ಎಂಬುದಾಗಿದೆ. ಸಾಕ್ಷಿಗಳ ಸಾಕ್ಷ್ಯವೇನೆಂದರೆ, ಮೃತನು ತನ್ನ ಮನೆಯಿಂದ ಹೊರಟ ತಕ್ಷಣವೇ, ಆಪಾದಿತನು ಆತನನ್ನು ಹಿಂಬಾಲಿಸಿದನು. ಈ ಸಾಕ್ಷ್ಯದ ಅಂಶವನ್ನು ಪ್ರಶ್ನಿಸದಿಲ್ಲದಿರುವುದನ್ನು ಅಧಿವಿಚಾರಣಾ ನ್ಯಾಯಾಲಯವು ಗಮನಿಸಿರುತ್ತದೆ. ಆದರೆ, ಇದು ಯಾವುದೇ ನಂಬಬಲ್ಲ ಸಾಕ್ಷ್ಯಗಳಿಲ್ಲದೆ ಆದಂತಹ ನರಹತ್ಯೆಯೆಂದು ಅಭಿಪ್ರಾಯಪಟ್ಟಿರುತ್ತದೆ. ಪ್ರಾ.ಸಾ.3ರ ಸಾಕ್ಷ್ಯವು ಅಸಮಂಜಸವಾಗಿದ್ದನ್ನು ಮತ್ತು ಪ್ರಾ.ಸಾ.3 ಪ್ರತಿಕೂಲ ಸಾಕ್ಷ್ಯವಾಗಿ ಬದಲಾಗಿದ್ದನ್ನು ಗಮನಿಸಿದ್ದರೂ ಸಹ, ಮತ್ತು ಮುಂದುವರಿದು, ದೂರು ನೀಡುವಲ್ಲಿ ವಿಳಂಬವಾಗಿರುವುದು ಪ್ರಾಸಿಕ್ಯೂಶನ್ನಿನ ಪ್ರಕರಣಕ್ಕೆ ಮಾರಕವಾಗಿದ್ದನ್ನು ಗಮನಿಸದ್ದರೂ ಸಹ, ಮತ್ತು ಸಾಕ್ಷಿಗಳ ಮತ್ತು ಪೊಲೀಸರ ಕಡೆಯಿಂದ ಯಾವುದೇ ಬಲವಾದ ಸಾಕ್ಷ್ಯವಿಲ್ಲದಿರುವುದು ಗಮನಿಸಿದ ನಂತರವೂ ಸಹಾ, ಅಧಿವಿಚಾರಣಾ ನ್ಯಾಯಾಲಯವು, ಮೇಲೆ ಹೇಳಲಾದ ಅಪರಾಧಗಳಿಗೆ ಆಪಾದಿತರನ್ನು ದೋಷಿ ಎಂದು ನಿರ್ಣಯಿಸಿ, ದೋಷವೆಸಗಿರುತ್ತದೆ.

21. ವಾದ–ವಿವಾದದ ಸಂದರ್ಭದಲ್ಲಿ, ಆಪಾದಿತನ ವಾದವನ್ನು ಪರಿಗಣಿಸುವಲ್ಲಿ ಅಧಿವಿಚಾರಣಾ ನ್ಯಾಯಾಲಯವು ವಿಫಲಗೊಂಡಿದ್ದು, ಮೃತನ ದೇಹದ ಮೇಲಾದ ಗಾಯವು ಕಾಡುಪ್ರಾಣಿಗಳ ದಾಳಿ ಅಥವಾ ಅಪಘಾತದ ಕಾರಣದಿಂದ ಸಂಭವಿಸಿರಬಹುದು, ಆದರೆ ಸದರಿ ಅಂಶವನ್ನು ಪರಿಗಣಿಸಲು ಯಾವುದೇ ನಿರ್ದಿಷ್ಟ ಸಾಕ್ಷ್ಯವಿರುವುದಿಲ್ಲ. ಆದಾಗ್ಯೂ, ಆಪಾದಿತನ ನಡವಳಿಕೆಯು ಆತನ ಉದ್ದೇಶವನ್ನು ತೋರ್ಪಡಿಸುತ್ತದೆ ಎಂಬ ತಪ್ಪು ನಿರ್ಣಯಕ್ಕೆ ಬಂದಿದ್ದು, ಈ ಸಂದರ್ಭದಲ್ಲಿ, ಪ್ರತಿಕೂಲ ಸಾಕ್ಷಿಯಾದ ಪ್ರಾ.ಸಾ.3 ರೊಂದಿಗೆ ಸೇರಿಸಲಾದ ಪ್ರಾ.ಸಾ.18ರ ಸಾಕ್ಷ್ಯ ಮತ್ತು ಇತರೆ ಸಾಂಧರ್ಬಿಕ ಸಾಕ್ಷ್ಯಗಳ ಮೇಲೆ ಅವಲಂಬಿತವಾಗಿ, ಅಭಿಪ್ರಾಯಪಡುವುದೇನೆಂದರೆ, ಅಪರಾಧವನ್ನು ರುಜುವಾತುಪಡಿಸಲು ಯಾವುದೇ

ನಿರ್ದಿಷ್ಟ ಸಾಕ್ಷ್ಯಗಳಿಲ್ಲದೇ, ಆಪಾದಿತನು ಮೃತನ ಮೇಲೆ ಹಲ್ಲೆನಡೆಸಿ ಆತನ ಸಾವಿಗೆ ಕಾರಣವಾಗಿರುತ್ತಾನೆ ಎಂಬುದಾಗಿದೆ.

22. ಪ್ರಾ.ಸ.5 ಸಂಜೀವಯ್ಯ, ಮೃತನಿಗೆ ಸೇರಿದ ಬಟ್ಟೆಯ ಜಪ್ತಿಗೆ ಸಂಬಂಧಿಸಿದ ಪಂಚ ಸಾಕ್ಷಿಯಾಗಿದ್ದು, ವಿಚಾರಣೆಯ ಸಂದರ್ಭದಲ್ಲಿ ಪ್ರತಿಕೂಲ ಸಾಕ್ಷಿಯಾಗಿ ಪರಿವರ್ತಿತನಾಗಿರುತ್ತಾನೆ. ಸಾಂದರ್ಭಿಕ ಸಾಕ್ಷಿಯಾದ ಪ್ರಾ.ಸಾ.6–ಸೋಮಯ್ಯ ಕೂಡ ಪ್ರತಿಕೂಲ ಸಾಕ್ಷಿಯಾಗಿ ಪರಿವರ್ತಿತನಾಗಿರುತ್ತಾನೆ. ಘಟನೆಗೆ ಪ್ರತ್ಯಕ್ಷ ಸಾಕ್ಷಿಗಳೆಂದು ಹೇಳಲಾದ ಪ್ರಾ.ಸಾ.8–ಬೆಳ್ಳಯ್ಯ, ಪ್ರಾ.ಸಾ.9–ಬೋರೆಗೌಡ ಮತ್ತು ಪ್ರಾ.ಸಾ.15–ಸೋಮ ಕೂಡ ಪ್ರತಿಕೂಲ ಸಾಕ್ಷಿಗಳಾಗಿ ಪರಿವರ್ತಿತನಾಗಿರುತ್ತಾರೆ. ಪ್ರಾಸಿಕ್ಯೂಶನ್ನಿನ ಪ್ರಕರಣವು ಮುಖ್ಯವಾಗಿ ಪ್ರಾ.ಸಾ.18–ಮಹೇಶನ ಸಾಕ್ಷ್ಯದ ಮೇಲೆ ಸುತ್ತುವರಿದಿರುತ್ತದೆ ಮತ್ತು ಪ್ರಾ.ಸಾ.18–ಮಹೇಶನು ಮೃತನ ಮತ್ತು ಆಪಾದಿತ ಸಂ.1 ಮಹದೇವ ಅಲಿಯಾಸ್ ಪಾಪಿಯ ಸಂಬಂಧಿಕನಲ್ಲದೆ ಬೇರೆ ಯಾರು ಆಗಿರುವುದಿಲ್ಲ. ಪ್ರಾ.ಸಾ.4–ಸುಶೀಲಾ ಆಪಾದಿತ ಸಂ.1ರ ಪತ್ನಿ ಮತ್ತು ಮೃತನ ಮಗಳಾಗಿರುತ್ತಾಳೆ. ಆಕೆ ಮತ್ತು ಆಪಾದಿತ ಸಂ.1 ನಡುವಿನ ನಿರ್ಬಂಧದ ಸಂಬಂಧದ ಬಗ್ಗೆ ಆಕೆಯೇ ವಿಶೇಷವಾಗಿ ಹೇಳಿಕೆ ನೀಡಿರುತ್ತಾಳೆ. ಮೃತನ ತಾಯಿಯಾದ ಪ್ರಾ.ಸಾ.14 ಜವರಮ್ಮ ಭಾಗಶಃವಾಗಿ ಪ್ರಾಸಿಕ್ಯೂಶನ್ ಪ್ರಕರಣವನ್ನು ಬೆಂಬಲಿಸಿರುತ್ತಾರೆ ಮತ್ತು ಭಾಗಶಃವಾಗಿ ಪ್ರತಿಕೂಲ ಸಾಕ್ಷಿಯಾಗಿ ಪರಿವರ್ತಿತರಾಗಿರುತ್ತಾರೆ. ಆಪಾದಿತ ಸಂ.1, ಮು.ಮಾ.1–ದೊಣ್ಣೆಯನ್ನು ಉಪಯೋಗಿಸಿ ಮೃತ ಚಿಕ್ಕ ಅಲಿಯಾಸ್ ಚಿಕ್ಕಯ್ಯನ ಮೇಲೆ ಹಲ್ಲೆ ನಡೆಸಿದನು ಎಂದು ಹೇಳಲಾಗುವುದಕ್ಕೆ ಸಂಬಂಧಿಸಿದಂತೆ ಆಕೆಯು, ತನ್ನ ಸಾಕ್ಷ್ಯದಲ್ಲಿ, ಏನನ್ನೂ ಹೇಳಿಕೆ ನೀಡಿರುವುದಿಲ್ಲ. ಪ್ರತಿಯೊಂದು ಸಾಕ್ಷಿಗಳ ಸಾಕ್ಷ್ಯಗಳಲ್ಲೂ ಅಸ್ಥಿರತೆ ಮತ್ತು ವಿವಾದವಿರುವುದು ಸಾಕ್ಷ್ಯಗಳ ಮೇಲ್ನೋಟಕ್ಕೆ ಕಂಡುಬರುತ್ತದೆ. ಪ್ರಾ.ಸ.3 ಪ್ರತಿಕೂಲ ಸಾಕ್ಷಿಯಾಗಿ ಪರಿವರ್ತಿತವಾಗಿದ್ದರೂ ಮತ್ತು ಪ್ರಾಸಿಕ್ಯೂಶನ್ ಪ್ರಕರಣವನ್ನು ಬೆಂಬಲಿಸದಿದ್ದರೂ ಸಹಾ, 'ಆಪಾದಿತನ ಸಂ.1 ಮೃತನನ್ನು ಹಿಂಬಾಲಿಸಿದನು' ಎಂಬ ಅಂಶವನ್ನು ತನ್ನ ಸಾಕ್ಷ್ಯದಲ್ಲಿ ತಳ್ಳಿಹಾಕುವುದಿಲ್ಲ. ಕೆಳ ನ್ಯಾಯಾಲಯವು ಅದನ್ನು ವಿಶ್ಲೇಷಿಸುವುದರಲ್ಲಿ ವಿಫಲವಾಗಿದ್ದು, ಮೃತನ ಪತ್ನಿಯಾದ ಪ್ರಾ.ಸಾ.2 ನೂರಲಮ್ಮ ಘಟನೆಗೆ ಪ್ರತ್ಯಕ್ಷ ಸಾಕ್ಷಿಯಾಗಿರುವುದಿಲ್ಲ ಮತ್ತು ಆಕೆಯು

ವದಂತಿ ಸಾಕ್ಷಿಯಾಗಿರುತ್ತಾರೆ. ಪಾಟೀ–ಸವಾಲಿನಲ್ಲಿ, ಆಪಾದಿತ ವ್ಯಕ್ತಿಗಳು ಘಟನೆ ಸಂಭವಿಸಿದ ಸ್ಥಳದ ಹತ್ತಿರ ಇದ್ದರು ಎಂಬುದಕ್ಕೆ ಒಂದು ಸಲಹೆಯನ್ನು ನೀಡಲಾಗಿದ್ದು, ಇದರಲ್ಲಿ ಆಪಾದಿತ ವ್ಯಕ್ತಿಗಳು ಹ್ಯಾಂಡ್ ಪೋಸ್ಟ್ ಹತ್ತಿರ ಕೂಲಿಗಳಾಗಿ ಕೆಲಸ ಮಾಡುತ್ತಿದ್ದರು ಎಂದು ವಾದಿಸುತ್ತದೆ. ಮೃತರ ಮತ್ತು ಆಪಾದಿತನ ಸಂಬಂಧಿ ಎಂದು ಹೇಳಲಾದ ಪ್ರಾ.ಸಾ.3 ಜವರಯ್ಯ ಪ್ರಾರಂಭದಲ್ಲಿ ಪ್ರಾಸಿಕ್ಯೂಶನ್ ಪ್ರಕರಣವನ್ನು ಬೆಂಬಲಿಸಿದ್ದು ತದನಂತರ ಪಾಟೀ–ಸವಾಲಿನಲ್ಲಿ ಆತನು ಹೇಳಿರುವುದೇನೆಂದರೆ, ಮೃತ ಚಿಕ್ಕ ಅಲಿಯಾಸ್ ಚಿಕ್ಕಯ್ಯನು ತಲೆಗೆ ಗಾಯಗೊಂಡು ನೆಲದ ಮೇಲೆ ಬಿದ್ದಿದ್ದನು ಮತ್ತು ಅಲ್ಲಿ ನೆರದಿದ್ದ ಜನರಿಂದ ಆಪಾದಿತನು ಓಡಿ ಹೋಗಿರುವುದರ ಬಗ್ಗೆ ತಾನು ತಿಳಿದುಕೊಂಡೆನು ಎಂಬುದಾಗಿದೆ ಮತ್ತು ಇದನ್ನು ಅಧೀನ ನ್ಯಾಯಾಲಯವು ವಿಶ್ಲೇಷಿಸುವುದರಲ್ಲಿಯೂ ಸಹ ವಿಫಲಗೊಂಡಿರುತ್ತದೆ. ಆತನು ಮತ್ತೆ ಹೇಳಿಕೆ ನೀಡುವುದೇನೆಂದರೆ, ಘಟನಾ ಸ್ಥಳಕ್ಕೆ ದೌಡಾಯಿಸಿದ ಸಮಯದಲ್ಲಿ ಆಪಾದಿತನು ಅಲ್ಲಿರಲಿಲ್ಲ ಮತ್ತು ಗಾಯಗೊಂಡಾತ ನೆಲದ ಮೇಲೆ ಬಿದ್ದಿದ್ದನು ಎಂಬುದಾಗಿದೆ. ಅಧಿವಿಚಾರಣಾ ನ್ಯಾಯಾಲಯವು, ಇಷ್ಟರ ಮಟ್ಟಿಗೆ ಈ ಸಾಕ್ಷಿಯನ್ನು ಪ್ರತಿಕೂಲವಾಗಿ ನಡೆಸಿಕೊಂಡದ್ದನ್ನು ಗಮನಿಸಿಯೂ, ಮೇಲೆ ಹೇಳಲಾದ ಸದರಿ ಅಪರಾಧಗಳಿಗೆ ಆಪಾದಿತನನ್ನು ದೋಷಿ ಎಂದು ನಿರ್ಧರಿಸಬಾರದಿತ್ತು. ಆಪಾದಿತನ ಅಪರಾಧವನ್ನು ರುಜುವಾತುಪಡಿಸುವ ಸಲುವಾಗಿ, ಪ್ರಾಸಿಕ್ಯೂಶನ್ ಪರವಾಗಿ ಮಂಡಿಸಿದ ಸಾಕ್ಷ್ಯಾಧಾರಗಳಲ್ಲಿ ಮರೆಮಾಚುವ ಅಂಶವಿದೆ ಎಂದು ಈ ಎಲ್ಲಾ ಮುಖ್ಯ ಸಾಕ್ಷಿಗಳ ಸಂಪೂರ್ಣ ಸಾಕ್ಷ್ಯಾಧಾರಗಳಿಂದ ಮೇಲ್ನೋಟಕ್ಕೆ ಕಂಡುಬರುತ್ತದೆ. ಆಪಾದಿತ ಸಂ.1 ಮೃತ ಚಿಕ್ಕ ಅಲಿಯಾಸ್ ಚಿಕ್ಕಯ್ಯನನ್ನು ಮು.ಮಾ.1–ದೊಣ್ಣೆಯಿಂದ ಆತನ ಬಹುಮುಖ್ಯ ಅಂಗವಾದ ತಲೆಗೆ ಹೊಡೆದು ಹಲ್ಲೆ ನಡೆಸಿ ಗಂಭೀರವಾಗಿ ಗಾಯಗೊಳಿಸಿದನು ಎಂಬುದರಲ್ಲಿ ಮತ್ತು ನಿಶಾನೆ ಪಿ.3 ದೂರಿನಲ್ಲಿ ಮಾಡಿದ ದೃಢೋಕ್ತಿಗಳಿಗೆ ಅಸ್ಥಿರತೆ ಮತ್ತು ವಿವಾದಗಳಿರುವುದು ಕಂಡುಬರುತ್ತದೆ. ಈ ಎಲ್ಲಾ ಸಂದರ್ಭಗಳ ಅಡಿಯಲ್ಲಿ, ಆಪಾದಿತನ ಅಪರಾಧವನ್ನು ಸುಸ್ಥಾಪಿಸುವ ಸಲುವಾಗಿ ಪ್ರಾಸಿಕ್ಯೂಶನ್ ಪ್ರಸ್ತುತ ಪಡಿಸಿದ ದಸ್ತಾವೇಜು ಸಾಕ್ಷ್ಯಗಳು ಮತ್ತು ಮೌಖಿಕ ಸಾಕ್ಷ್ಯಗಳನ್ನು ಸರಿಯಾದ ದೃಷ್ಟಿಕೋನದಿಂದ ಮರು–ವಿಶ್ಲೇಷಿಸುವ ಅವಶ್ಯಕತೆಯಿರುತ್ತದೆ.

23. ಪ್ರಾ.ಸಾ.5, ಪ್ರಾ.ಸಾ.6, ಪ್ರಾ.ಸಾ.8, ಪ್ರಾ.ಸಾ.9, ಪ್ರಾ.ಸಾ.14, ಪ್ರಾ.ಸಾ.15 ಮಂಡಿಸಿದ ಸಾಕ್ಷ್ಯಾಧಾರಗಳು ನಿಶಾನೆ ಪಿ.12, ನಿಶಾನೆ ಪಿ.13 ಮತ್ತು ನಿಶಾನೆ ಪಿ.14ರ ಅಂಶಗಳನ್ನು ವಿರೋಧಿಸುವುದಿಲ್ಲ. ಅವರುಗಳ ಸಾಕ್ಷ್ಯವು ನಿಶಾನೆ ಪಿ.3 ರಲ್ಲಿನ ದೃಢೋಕ್ತಿಗಳಿಗೆ ವಿರುದ್ಧವಾಗಿವೆ. ಈ ಎಲ್ಲಾ ಸಾಕ್ಷಿಗಳ ಸಾಕ್ಷ್ಯಾಧಾರಗಳು ಮೇಲ್ನೋಟಕ್ಕೆ ಸೂಚಿಸುವುದೇನೆಂದರೆ ಪರಸ್ಪರ ಅಸ್ಥಿರತೆ ಮತ್ತು ವಿವಾದಗಳಿವೆ ಎಂಬುದಾಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಆಪಾದಿತನ ಅಪರಾಧವನ್ನು ರುಜುವಾತು ಪಡಿಸುವ ಸಲುವಾಗಿ ಪ್ರಾಸಿಕ್ಯೂಶನ್ ಪ್ರಸ್ತುತಪಡಿಸಿದ ಸಾಕ್ಷ್ಯಾದಲ್ಲಿ ಕೆಲವು ಮರೆಮಾಚುವ ಅಂಶಗಳಿವೆ ಎಂಬುದಾಗಿದೆ. ಮಹದೇವ ಅಲಿಯಾಸ್ ಪಾಪಿಯ ಅಪರಾಧವನ್ನು ಪ್ರಾಸಿಕ್ಯೂಶನ್ ಸುಸ್ಥಾಪಿಸಿದೆ ಎಂಬ ಸೂಕ್ತವಾದ ತೀರ್ಮಾನಕ್ಕೆ ಬರುವ ಸಲುವಾಗಿ ಈ ಎಲ್ಲಾ ಸಾಕ್ಷಿಗಳ ಸಂಪೂರ್ಣ ಸಾಕ್ಷ್ಯಾಧಾರಗಳನ್ನು ತಪ್ಪಾಗಿ ಓದಲಾಗಿದೆ ಜೊತೆಗೆ ಅಧಿವಿಚಾರಣಾ ನ್ಯಾಯಾಲಯದ ದಿಕ್ಕು ತಪ್ಪಿಸಿರುತ್ತದೆ, ಆದ್ದರಿಂದ, ಈ ಅಪೀಲಿನಲ್ಲಿ ದಾಖಲೆಯಲ್ಲಿರುವ ಸಂಪೂರ್ಣ ಸಾಕ್ಷ್ಯಗಳನ್ನು ನಾವು ಮರು–ವಿಶ್ಲೇಷಣೆ ಮಾಡಬೇಕಾಗಿರುತ್ತದೆ. ಆದ್ದರಿಂದ, ಮೇಲೆ ಹೇಳಲಾದ ಎಲ್ಲಾ ಅಂಶಗಳಲ್ಲಿ, ಆಪಾದಿತ ಸಂ.1, ಆಪಾದಿತ ಸಂ.2ರ ಜೊತೆಗೂಡಿ ಮೃತ–ಚಿಕ್ಕ ಅಲಿಯಾಸ್ ಚಿಕ್ಕಯ್ಯನ ಮೇಲೆ ಮು.ಮಾ.1 (ದೊಣ್ಣೆ)ಯಿಂದ ಹಲ್ಲೆ ನಡೆಸಿ ಕೊಲೆ ಮಾಡಿದ್ದು, ಮೃತನು ಗಂಭೀರ ಗಾಯಗಳಿಗೆ ತುತ್ತಾಗಿದ್ದನು ಎಂದು ಹೇಳಲಾಗಿದ್ದು, ಇದನ್ನು ಸಾಧ್ಯಗೊಳಿಸಲು ಯಾವುದೇ ಸಕಾರಾತ್ಮಕ, ದೃಢೀಕೃತ ಮತ್ತು ಅಂಗೀಕಾರ್ಹ ಸಾಕ್ಷ್ಯಾಧಾರವನ್ನು ಪ್ರಾಸಿಕ್ಯೂಶನ್ ಪ್ರಸ್ತುತ ಪಡಿಸಲು ಸಮರ್ಥವಾಗಿರುವುದಿಲ್ಲ ಎಂಬುದು ನಮ್ಮ ಅಭಿಪ್ರಾಯವಾಗಿರುತ್ತದೆ. ಆದ್ದರಿಂದ, ಮೇಲೆ ಹೇಳಲಾದ ಕಾರಣಗಳಿಂದ, ನಾವು ಈ ಕೆಳಗಿನಂತೆ ಆದೇಶಿಸಲು ಮುಂದುವರೆಯುತ್ತೇವೆ:

## ಆದೇಶ

ಈ ಅಪೀಲನ್ನು ಪುರಸ್ಕರಿಸಲಾಗಿದೆ, ಪರಿಣಾಮವಾಗಿ, ಮೂರನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯ, ಮೈಸೂರು, ಎಸ್.ಸಿ.ಸಂ.50/

2012 ರಲ್ಲಿ ದಿನಾಂಕ: 10/12.12.2013 ರಂದು ಹೊರಡಿಸಿದ ಅಪರಾಧ ನಿರ್ಣಯ ತೀರ್ಪು ಮತ್ತು ಶಿಕ್ಷೆಯ ಆದೇಶವನ್ನು ತಳ್ಳಿಹಾಕಲಾಗಿದೆ. ಭಾರತ ದಂಡ ಸಂಹಿತೆಯ ಪ್ರಕರಣ 34 ರಲ್ಲಿ ಓದಲಾದ ಪ್ರಕರಣ 302ರ ಅಡಿಯಲ್ಲಿ ದಂಡನೀಯ ಅಪರಾಧಗಳಿಗೆ ಸಂಬಂಧಿಸಿದಂತೆ ಆಪಾದಿತ ಸಂ.1 – ಮಹದೇವ ಅಲಿಯಾಸ್ ಪಾಪಿಯ ವಿರುದ್ಧ ದಾಖಲಾದ ಆರೋಪಗಳಿಂದ ಆತನನ್ನು ಈ ಮೂಲಕ ಬಿಡುಗಡೆಗೊಳಿಸಲಾಗಿದೆ.

ಆಪಾದಿತ ಸಂ.1 – ಮಹದೇವ ಅಲಿಯಾಸ್ ಪಾಪಿಯನ್ನು, ಇನ್ನಿತರೆ ಯಾವುದೇ ಪ್ರಕರಣದಲ್ಲಿ ಆತನ ಅವಶ್ಯಕತೆ ಇಲ್ಲದಿದ್ದರೆ, ತಕ್ಷಣವೇ ಬಂಧನದಿಂದ ಮುಕ್ತಗೊಳಿಸಬೇಕೆಂದು ಆದೇಶಿಸಿದೆ.

ಆಪಾದಿತ ಸಂ.1 – ಮಹದೇವ ಅಲಿಯಾಸ್ ಪಾಪಿಯನ್ನು ತಕ್ಷಣವೇ ಬಂಧನದಿಂದ ಮುಕ್ತಗೊಳಿಸಲು ಸಂಬಂಧಪಟ್ಟ ಜೈಲು ಪ್ರಾಧಿಕಾರಕ್ಕೆ ಸೂಚಿಸಬೇಕೆಂದು ಈ ಮೂಲಕ ರಿಜಿಸ್ಟ್ರಾರ್ ಕಚೇರಿಗೆ ನಿರ್ದೇಶಿಸಿದೆ.

ಈಗಾಗಲೇ ಆಪಾದಿತನು ಯಾವುದಾದರು ಜುಲ್ಮಾನೆ ಮೊತ್ತವನ್ನು ಪಾವತಿಸಿದ್ದರೆ, ಅದನ್ನು ಸಮಂಜಸವಾದ ಗುರುತು ಮತ್ತು ರಶೀದಿಯೊಂದಿಗೆ ಆತನಿಗೆ ಹಿಂದಿರುಗಿಸಬೇಕಾಗಿ ಆದೇಶಿಸಿದೆ.